ಕಳೆದ ವರುಷದ ಪಂಚಾಂಗದಲ್ಲಿ ವಿವರವಾಗಿ ಪ್ರಕಟಿಸಿದ ವಿಲಾಯತಿಯ ಮಹಾ ಯುದ್ಧ ಈ ವರುಷದ ಆದಿಯಲ್ಲಿ ತೀರಿತು. ಆ ಯುದ್ಧವನ್ನು ಆರಂಭಿಸಿದ ರುಸ್ಯರ ಮಹಾರಾಜನಾದ ನಿಕೊಲಾಸನ ಮಗನಾದ ಯೆರಡನೆ ಅಲೆಕ್ಷಂಡ್ರನು ತಕ್ಕ ಸಮಯವನ್ನು ಕಂಡ ಕೂಡಲೆ, ಶತ್ರುಗಳಾದ ಪರರಾಯರಿಗೆ ತನ್ನ ರಾಯಭಾರಿಯವರ ಮುಖಾಂತರ ಸಮಾಧಾನ ಹೇಳಿ ಕಳುಹಿಸಿದನು. ಅವರು ಸಂತೋಷವಾಗಿ ಒಪ್ಪಿಕೊಂಡರು. ಯಾಕಂದರೆ ಫ್ರಾಂಕಜನದ ಮಹಾರಾಜನಾದ ಮೂರನೇ ನಪೋಲಿಯೋನನಿಗೆ ಲಕ್ಷ ಜನರ ದಂಡಿನಿಂದ ನಡಿಸ ಬೇಕಾದ ಯುದ್ಧ ಹೆಚ್ಚು ಖರ್ಚಿನಿಂದ ಭಾರಿಯಾಗುತ್ತಾ ಬಂತು. ಆದ್ದರಿಂದ ತನ್ನ ಜನರಿಗೆ ತಿಳಿದ ಶೌರ್ಯತ್ವದ ಕೀರ್ತಿ ಕಡಿಮೆ ಆದೀತೇ ಹೊರತು ಹೆಚ್ಚಾಗ್ಯದಿಲ್ಲವೆಂದು, ಯುದ್ಧವನ್ನು ನಿಲ್ಲಿಸಿದರೆ ವಾಸಿಯೆಂಬ ಆಲೋಚನೆಯಿಂದ ಸಮಾಧಾನದ ಮಾತಿಗೆ ಸುಲಭದಲ್ಲಿ ಮನಸ್ಕರಿಸಿದನು. ಅಂಗ್ಲದೇಶದವರು ವ್ಯಾಪಾರದಲ್ಲಿ ಆಸಕ್ತರಾಗಿರುವ ಕಾರಣ ಬಹಳ ಹಣ ವ್ಯರ್ಥವಾಗಿ ಅಪಹಾರ ಮಾಡಿ, ವ್ಯಾಪಾರಕ್ಕೆ ಅಪ್ರಯೋಜನವಾದ ಯುದ್ಧವನ್ನು ಅವಶ್ಯವಿಲ್ಲದೆ ನಡಿಸುವದಕ್ಕೆ ಮನಸ್ಸಿಲ್ಲದವರಾಗಿದ್ದಾರೆ. ಆದದರಿಂದ ಇವರು ಸಹಾ ಸಮಾಧಾನ ಮಾಡಿಕೊಳ್ಳುವದಕ್ಕೆ ಅನುಮತವಾದರು. ಹೀಗೆ ಇರಲಾಗಿ, ತುರುಷ್ಕದೇಶಕ್ಕೆ ಸಮೀಪವಾದ ಕಪ್ಪುಸಮುದ್ರದಲ್ಲಿ ಇನ್ನು ಮುಂದೆ ಯುದ್ಧದ ಹಡಗಗಳನ್ನು ಇಟ್ಟುಕೊಳ್ಳುವದಿಲ್ಲವೆಂದೂ, ಸುಲ್ತಾನನ ಸಂಸ್ಥಾನಕ್ಕೆ ಇನ್ನು ಮುಂದೆ ನಾವು ತಂಟೆ ಮಾಡುವದಿಲ್ಲವೆಂದೂ, ದಾನುಬ್ಯನದಿಗೆ ಉತ್ತರ ದಿಕ್ಕಿನ ಸೀಮೆಯನ್ನು ಬಿಟ್ಟು ಕೊಡುತ್ತೇವೆಂದೂ ಮಾತು ಕೊಟ್ಟ ರುಸ್ಯಮಹಾರಾಜನ ಸಂಗಡ ಫ್ರಾಂಕ ಮತ್ತು ಇಂಗ್ಲಂಡದವರು ಸಮಾಧಾನದ ಒಡಂಬಡಿಕೆಯನ್ನು ಪರಿಸಪಟ್ಟಣದಲ್ಲಿ ಕೂಡಿ ಬಂದ ರಾಯಭಾರಿಗಳ ಮುಖಾಂತರ ಕಟ್ಟಿಕೊಂಡು ಸಲ್ಲಾ ಮಾಡಿದರು. ಆದರೆ ಹೊಸ್ತಾಗಿ ಉಂಟಾದ ಅನ್ಯೋನ್ಯದ ಒಡಂಬಡಿಕೆ ಸ್ಥಿರವಾಗಿರುವದೋ ಯೇನೋ ಯೆಂದು ಪೂರ್ಣ ನಿಶ್ಚಯವಾಗಿ

ಕೊಡತಕ್ಕವನು ಇಲ್ಲ. ಪಶ್ಚಿಮದಿಕ್ಕಿನ ಸಂಸ್ಥಾನದವರು ಮಾಡುವ ಸಹಾಯದಿಂದ ತುರ್ಕಿ ದೇಶದ ಈ ಕಾಲದ ಸುಲ್ತಾನನು ತನ್ನ ರಾಜ್ಯದಲ್ಲಿರುವ ಬೇರೆ ಬೇರೆ ಜಾತಿಯ ಕ್ರೈಸ್ತರಿಗೆ ಇನ್ನು ಮುಂದೆ ಅನ್ಯಾಯ ಮಾಡುವದು ಇಲ್ಲವೆಂದೂ, ಕ್ರೈಸ್ತಸಭೆಯಲ್ಲಿ ಸೇರುವ ಮುಸಲಮಾನರಿಗೆ ಸಹಾ ಪೂರ್ವಪದ್ಧತಿ ಪ್ರಕಾರ ಪ್ರಾಣಶಿಕ್ಷೆ ಮಾಡುವದಿಲ್ಲವೆಂದೂ ಹಾದಿಬಿಟ್ಟು, ಹಾಂದು ಸ್ಪಷ್ಟವಾಗಿ ಪ್ರಕಟ ಮಾಡಿದನು. ಇದನ್ನು ಕೈಕೊಳ್ಳುವನೋ ಮೀರುವನೋ ಯೆಂಬುವದಕ್ಕೆ ಬಹಳ ಸಂಶಯವಿದೆ.

ಹಿಂದುದೇಶವನ್ನು ೧೮೪೮ನೇ ವರುಷದ ಜನವರಿಯಿಂದ ೧೮೫೬ನೇ ಮಾರ್ಚಿ ಪರ್ಯಂತರ ಕುಂಪಣೀಸರಕಾರ ಹೌಸಿನಲ್ಲಿ ಸರ್ವಾಧಿಕಾರಿಯಾಗಿ ಆಳಿಕೊಂಡಿದ್ದ ದಲ್‌ಹೌಸಿಯೆಂಬ ಮಾರ್ಕ್ವಿಸ್ ಬಹದ್ದೂರವರು ತಮ್ಮ ಮಹಾಧಿಕಾರವನ್ನು ಲಾರ್ಡ್ ಕನಿಂಗ್ ಬಹದ್ದೂರವರಿಗೆ ಒಪ್ಪಿಸಿ ಕೊಟ್ಟು, ವಿಲಾಯತಿಗೆ ಹೋದರು. ಅವರು ಯೆಲ್ಲಾ ಗವರ್ನರ್ ಜನರಲ್ ಹಾರ್ಡಿಂಜರಲ್ಲಿ ಹಿಂದುಸ್ಥಾನದ ರಾಜ್ಯಭಾರ ಮಾಡಿಕೊಳ್ಳುವದರಲ್ಲಿ ಹೆಚ್ಚು ಉದ್ಯುಕ್ತರಾಗಿದ್ದು, ಯೆಂಟು ವರುಷ ದಣಿಯದೆ, ಆ ಉದ್ಯೋಗವನ್ನು ಬಹಳ ಬುದ್ಧಿಯಿಂದಲೂ ಪೌರುಷದಿಂದಲೂ ನಡಿಸಿ, ಕಡೆಯಲ್ಲಿ ಬಹಳ ದೇಹಾಯಾಸಗೊಂಡು, ಸೀಮೆಗೆ ಹೋದರು. ಅವರ ಕೀರ್ತಿ ಲೋಕದಲ್ಲೆಲ್ಲಾ ಪ್ರಖ್ಯಾತವಾಯಿತು. ಅವರು ಸೀಮೆಗೆ ತಿರುಗಿ ಬಂದ ಮೇಲೆ, ಕುಂಪಣೀಸಂಸ್ಥಾನದವರು ರಾಣಿಯ ಪ್ರಧಾನರೂ ಅಂಗ್ಲದೇಶದ ರಾಜ್ಯಸಭೆಯವರೂ ಕೂಡಿ, ಅವರಿಗೆ ಬಹು ಮಾನಮರ್ಯಾದೆಗಳು ಮಾಡಿ, ವರುಷಂಪ್ರತಿಯಲ್ಲು ಅರ್ಧ ಲಕ್ಷ ರೂಪಾಯಿ ಪೆನ್‌ಷನ್ ನೇಮಕ ಮಾಡಿದರು. ಮಾರ್ಕ್ವಿಸ್ ಅವ ದಲ್‌ಹೌಸಿ ಬಹದ್ದೂರವರು ಹಿಂದುಸ್ಥಾನಕ್ಕೆ ಬಂದ ಕೆಲವು ತಿಂಗಳ ಮೇಲೆ, ಮುಲ್‌ತಾನದ ದಿವಾನ್ ಮೂಳರಾಜನು ಕುಂಪಣೀಸರಕಾರದ ಉದ್ಯೋಗಸ್ಥರಾದ ಧೊರೆಗಳಿಬ್ಬರನ್ನು ಕೊಂದು ಹಾಕಿಸಿದದರಿಂದಲೂ, ಮುಂಚೆ ಮಹಾ ಯುದ್ಧಗಳಲ್ಲಿ ಅಪಜಯ ಪಟ್ಟು, ಕುಂಪಣೀಸರಕಾರಕ್ಕೆ ಹೊಳಗಾದ ಸಿಕ್ಕರು ಅವನ ಪಕ್ಷದಲ್ಲಿ ಸೇರಿದ್ದರಿಂದಲೂ, ದ್ವಿತೀಯ ಸಿಕ್ಕ ಕಾಳಗ ಹುಟ್ಟಿತು. ಇದರಲ್ಲಿಯೂ ಸಿಕ್ಕರು ಸೋತು ಅಪಜಯ ಪಟ್ಟದರಿಂದ, ಪಂಜಾಬ್ ಯೆಂಬ ದೇಶವೆಲ್ಲಾ ದಲ್‌ಹೌಸಿ ಬಹದ್ದೂರವರ ಅಪ್ಪಣೆಯಿಂದ ಕುಂಪಣೀಸರಕಾರದ ರಾಜ್ಯಕ್ಕೆ ಸೇರಿತು. ರಾಜ್ಯಭ್ರಷ್ಟನಾದ ಹುಡುಗನಾದ ದುಲೀಪಸಿಂಗನಿಗೆ ಪೂರ್ವದಲ್ಲಿ ಪಂಜಾಬನ್ನು ಆಳಿದ ಮಹಾರಾಜನ ಮಗನಾದದರಿಂದ ವರುಷಂಪ್ರತಿಯಲ್ಲು ನಾಲ್ಕು ಲಕ್ಷ ರೂಪಾಯಿ ಪೆನ್‌ಷನ್ ನೇಮಿಸಿದರು. ದುಲೀಪಸಿಂಗ ಮಹಾರಾಜರು ಕೆಲವು ವರುಷ ಜಾಗ್ರತೆಯಾಗಿ ವಿದ್ಯಾಭ್ಯಾಸ ಮಾಡಿ, ದೇವರ ವಾಕ್ಯವನ್ನು ಸಹಾ ಓದಿ, ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು, ಹದಿನಾರು ವರುಷದ ಪ್ರಾಯದಲ್ಲಿ ಕ್ರೈಸ್ತಸ್ನಾನ ತೆಗೆದುಕೊಂಡು, ಕ್ರೈಸ್ತಸಭೆಯಲ್ಲಿ ಸೇರಿದರು. ಪಂಜಾಬ್‌ದೇಶವು ಕುಂಪಣೀ ಸರಕಾರದ ಅಧಿಕಾರಕ್ಕೆ ಸೇರಿದಂದಿನಿಂದ ಸಮಾಧಾನವಾಗಿಯೂ ಸೌಖ್ಯವಾಗಿಯೂ ಯೆಲ್ಲಾ ವಿಷಯದಲ್ಲು ವೃದ್ಧಿ ಆಗುತ್ತಾ ಇದೆ.

ದಲ್‌ಹೌಸಿ ಬಹದ್ದೂರವರು ಪಂಜಾಬ್‌ದೇಶವನ್ನು ಕುಂಪಣೀಸರಕಾರದವರ ಹೌಸಿನಲ್ಲಿ ಸ್ಥಾಪಿಸಿಕೊಂಡ ಮೇಲೆ, ಯೆರಡು ವರುಷ ಕಳದ ತರುವಾಯ ಬ್ರಹ್ಮದೇಶದ ರಾಜನ ಉದ್ಯೋಗಸ್ಥರು ರಂಗೂನಿನಲ್ಲಿ ಇದ್ದ ಅಂಗ್ಲದೇಶಸ್ಥರಾದ ಸಾಹುಕಾರರಿಗೆ ಅನ್ಯಾಯವಾಗಿ ತಂಟೆ ನಡಿಸಿದದರಿಂದಲೂ; ಅದರಿಂದ ಹುಟ್ಟಿದ ವ್ಯಾಜ್ಯವನ್ನು ಬ್ರಹ್ಮರಾಜರು ಸಮಾಧಾನವಾಗಿ ತೀರಿಸಲೊಲ್ಲದೆ ಇದ್ದದರಿಂದಲೂ, ದಲ್‌ಹೌಸಿ ಬಹದ್ದೂರವರು ದಂಡು ಕಳುಹಿಸಿ, ಯುದ್ಧ ಮಾಡಿ, ಬ್ರಹ್ಮರಾಜರ ಸ್ವಲ್ಪವನ್ನು ಆಕ್ರಮಿಸಿಕೊಂಡು, ಬಂಗಾಳ ಸಮುದ್ರ ಪ್ರದೇಶವಾದ ಪೆಗೂ ಸೀಮೆಯನ್ನು ಸ್ವಾಧೀನ ಮಾಡಿಕೊಂಡು, ಕುಂಪಣೀಸರಕಾರದ ರಾಜ್ಯಕ್ಕೆ ಸೇರಿಸಿದನು. ಬ್ರಹ್ಮರಾಜರು ಅಪಜಯವಂತರಾಗಿ, ಪೆಗೂಸೀಮೆಯನ್ನು ಕುಂಪಣೀಸರಕಾರಕ್ಕೆ ಬಿಟ್ಟು, ಕುಂಪಣೀಯವರ ಸಂಗಡ ಈಗ ಸಮಾಧಾನವಾಗಿದ್ದಾರೆ. ಪೆಗೂದೇಶಸ್ಥರು ಬ್ರಹ್ಮರಾಜರ ದುರಧಿಕಾರದಿಂದ ಬಿಡುಗಡೆಯಾಗಿ, ಸಂತೋಷದಿಂದ ಕುಂಪಣೀಯವರಿಗೆ ವಶವಾಗಿದ್ದು ಸುಖವಾಗಿದ್ದಾರೆ.

ಯೆರಡು ವರುಷಕ್ಕೆ ಮುಂಚೆ ನಾಗಪುರದೇಶದ ರಾಜನು ಪುತ್ರಸಂತಾನವಿಲ್ಲದೆ ಕಾಲವಾಗಿಹೋದದರಿಂದ,

ದಲ್‌ಹೌಸಿ ಬಹಾದ್ದರವರು ನಾಗಪುರದೇಶವನ್ನು ಸಹಾ ಕುಂಪಣೀರಾಜ್ಯಕ್ಕೆ ಸೇರಿಸಿದರು.

ಅಯೋಧ್ಯಾಪಟ್ಟಣದ ರಾಜರು ತಮ್ಮ ದೇಶವನ್ನು ಬಹಳ ವರುಷದಿಂದ ಕುಂಪಣಿಯವರ ಆಶ್ರಯದಿಂದಲೂ ಅನುಮತಿಯಿಂದಲೂ ಆಳಿಕೊಳ್ಳುತ್ತಾ ಇದ್ದರು. ಆದರೆ ಅವರು ರಾಜ್ಯದ ಆಳುವಿಕೆಯಲ್ಲಿ ಬುದ್ಧಿ ಇಲ್ಲದವರಾಗಿದ್ದು, ದುಷ್ಟ ಜನರಿಗೆ ರಾಜ್ಯದ ಮುಖ್ಯವಾದ ಅಧಿಕಾರಗಳನ್ನು ಒಪ್ಪಿಸಿ ಕೊಟ್ಟು, ಪ್ರಜೆಗಳ ಸುಖಕ್ಷೇಮವನ್ನು ಚಿಂತಿಸದೆ, ತಮ್ಮ ದೇಶವನ್ನು ಹಾಳು ಮಾಡುತ್ತಾ ಬಂದದರಿಂದ, ದಲ್‌ಹೌಸಿ ಬಹಾದ್ದರವರು ಮುಂಚೆ ಮಾಡಿದ ಒಡಂಬಡಿಕೆ ಪ್ರಕಾರ ಅವರಿಂದ ರಾಜ್ಯಾಧಿಕಾರವನ್ನು ತೆಗೆದುಕೊಂಡು, ಅವರಿಗೆ ತಕ್ಕ ಪೆನ್‌ಷನ್ ಕೊಟ್ಟು, ಅವರ ರಾಜ್ಯವನ್ನು ಕುಂಪಣೀ ಹೆಸರಿನಲ್ಲಿ ಕಳೆದ ವರುಷದಲ್ಲಿ ಸ್ವತಂತ್ರಿಸಿಕೊಂಡರು.

ಈ ಪ್ರಕಾರವಾಗಿ ನಾಲ್ಕು ದೊಡ್ಡ ರಾಜ್ಯಗಳಾದ ಪಂಜಾಬ್, ಪ್ರೊಮ್, ನಾಗಪುರ, ಅಯೋಧ್ಯಾ ದೇಶಗಳು ದಲ್‌ಹೌಸಿ ಬಹಾದ್ದರವರ ಮುಖಾಂತರ ಕುಂಪಣೀ ರಾಜ್ಯಕ್ಕೆ ಕೂಡಿ ಬಂತು. ಇವುಗಳ ಹೊರತು ಕೆಲವು ಚಿಕ್ಕ ಸೀಮೆಗಳು ದಲ್‌ಹೌಸಿ ಬಹಾದ್ದರವರು ಆಳಿದ ಕಾಲದಲ್ಲಿ ಕುಂಪಣೀಸರಕಾರಕ್ಕೆ ವಶವಾದವು. ಯಾವವೆಂದರೆ—ಸಾತಾರರಾಜ್ಯ ಒಂದು, ಝಾನ್ಸಿರಾಜ್ಯ ಒಂದು; ಈ ರಾಜ್ಯಗಳ ದೊರೆಗಳು ಪುತ್ರಸಂತಾನವಿಲ್ಲದೆ ಸತ್ತು ಹೋದದರಿಂದ, ಕುಂಪಣೀಸರಕಾರದವರು ಒಪ್ಪಿಸ್ಥರಾದರು. ಇದಲ್ಲದೆ ನಿಜಾಮಲ್ಲೀಖಾನ್ ಬಹದ್ದರವರು ಕುಂಪಣೀಸರಕಾರಕ್ಕೆ ಸಲ್ಲಿಸಬೇಕಾಗಿಯೂ, ತಮ್ಮ ಸಂಸ್ಥಾನದ ಸಂರಕ್ಷಣೆಗೆ ಕುಂಪಣೀಸರಕಾರವು ಹೈದರಾಬಾದಿನ ಸಮೀಪದಲ್ಲಿ ಇಡತಕ್ಕ ದಂಡಿನ ನಿತ್ಯ ಖರ್ಚಿಗಾಗಿಯೂ, ಬೇರಾರ್ ದೇಶವನ್ನು, ಅದರ ಎಲ್ಲೆವತ್ತಿನಲ್ಲಿ ಇರುವ ಕೆಲವು ತಾಲೂಕುಗಳನ್ನೂ ಕುಂಪಣಿಗೆ ಒಪ್ಪಿಸಿ ಬಿಟ್ಟರು. ಮತ್ತು ದಲ್‌ಹೌಸಿ ಬಹಾದ್ದರವರು ಕುಂಪಣೀಸರಕಾರದ ಮೇಲೆ ಕರಾರತ್ತು ಮಾಡಿದ ಅಂಗಳರಾಜರ ಸೀಮೆಯನ್ನೂ, ಸಿಕಿರಾಜರು ಕುಂಪಣೀರಾಜಕಾರಿಯಾದ ವಾಬ್ದಾರಿಯನ್ನು ಕೈಕರ ಹಿಡಿದದರಿಂದ, ಸಿಕಿದೇಶದ ಬೈಲುಸೀಮೆಯನ್ನೂ, ಖೈರಪುರದ ಮೀರ್ ಅಲ್ಲಿ ಮುರಾದ್ ಯಂಬವರು ಹೊಂದು ಕಾಗದನಾಮೆಯಲ್ಲಿ ತಪ್ಪು ಕೆಲಂ ಸೇರಿಸಿದ್ದರಿಂದ, ಅವರು ಮೋಸದಿಂದ ಅಪಹರಿಸಿದ ತಾಲೂಕುಗಳನ್ನು ಜಪ್ತಿ ಮಾಡಿದರು.

ಹೋದ ವರುಷದಲ್ಲಿ ಕರ್ನಾಟಕದ ನವಾಬರು ಪುತ್ರಸಂತಾನವಿಲ್ಲದೆ ತೀರಿ ಹೋದದರಿಂದ, ನವಾಬ ಯಂಬ ಮನೆತನದ ಹೆಸರು ತಪ್ಪಿಸಿ ಬಿಟ್ಟು, ನವಾಬರಿಗೆ ಕುಂಪಣಿಯಿಂದ ಕೊಡುತ್ತಾ ಇದ್ದ ಉಂಬಳಿಯನ್ನು ನಿಲ್ಲಿಸಿ, ಅವರ ಬಂಧುವರ್ಗದಲ್ಲಿ ಕೆಲವರಿಗೆ ತಕ್ಕ ಪೆನ್‌ಷನ್ ನೇಮಿಸಿದರು. ಕೆಲವು ಕಾಲಾನಂತರ ತಂಜಾವೂರ ರಾಜರು ಸಹ ಗಂಡು ಮಕ್ಕಳು ಇಲ್ಲದೆ ಪ್ರಾಪ್ತರಾದ್ದರಿಂದ, ಅವರ ಬಹುಮಾನ ನಿಂತು ಹೋಗಿ, ಅವರ ಬಂಧುಗಳ ಕೆಲವರಿಗೆ ಪೆನ್‌ಷನ್ ವಿಧಿಸಿದರು.

ದಲ್‌ಹೌಸಿ ಬಹಾದ್ದರವರ ಆಳಿಕೆಯಲ್ಲಿ ಕುಂಪಣೀ ರಾಜ್ಯಕ್ಕೆ ಕೂಡಿದ ಮುಖ್ಯವಾದ ದೇಶಗಳಿಂದ ಕುಂಪಣೀ ಖಜಾನೆಗೆ ೪,೩೩,೦೦,೦೦೦ ರೂಪಾಯಿ ವರುಷಂಪ್ರತಿಯಲ್ಲು ಸೇರುತ್ತದೆ. ಹ್ಯಾಗಂದರೆ ವಿವರ—

ದೇಶದ ಹೆಸರು.	ರೂ.
ಪಂಜಾಬಿನ ಪ್ರಾಂತ್ಯವಳಿ	೧೫೦ 00000
ಪೈಗಾವಿನ	೨೭ 00000
ನಾಗಪುರ	೪೧ 00000
ಅಯೋಧ್ಯಾ	೧೪೫ 00000
ಸಾತಾರ	೧೫ 00000
ಝಾನ್ಸಿ	೫ 00000
ಹೈದರಾಬಾದ	೫೦ 00000
ಜಮಲಾ	೪೩೩ 00000

ದಲ್‌ಹೌಸಿ ಬಹಾದ್ದರವರ ಆಳಿಕೆಯ ಹೊಂದನೇ ವರುಷದಲ್ಲಿ ಹಿಂದುಸ್ಥಾನದ ಪ್ರಾಂತ್ಯವಳಿ ಇಪ್ಪತ್ತಾರು ಕೋಟಿಗೆ ಮುಟ್ಟಿ ಇತ್ತು. ಅವರ ಆಳಿಕೆಯ ಕಡೆಯ ವರುಷದಲ್ಲಿ ಮೂವತ್ತೊಂದು ಕೋಟಿಗಿಂತ ಹೆಚ್ಚಾಯಿತು.

ಹಿಂದುಸ್ಥಾನದ ವ್ಯಾಪಾರ ಸಹಾ ಬಹಳ ವೃದ್ಧಿಯಾಗುತ್ತಾ ಬಂತು. ಕಲಕತ್ತಾ ಬಂದರಕ್ಕೆ ದಲ್‌ಹೌಸಿ ಬಹಾದ್ದರವರ ದಿವಸದಲ್ಲಿ ಬಂದ ಹಡಗಗಳ ವಿವರ—

ವರುಷ.	ಹಡಗ.	ಸರಕುಗಳ ಮಿಗುವಿನ ಕುಮಾರು ಪ್ರಮಾಣ.
೧೮೪೮	೬೨೫೯	೨೧೮೦೦೦೦೦
೧೮೫೪	೮೬೬	೩೮೪೦೦೦೦೦
೧೮೫೫ ನೇ ವರುಷದ ಮೂ ತ್ತು ತಿಂಗಳುಗಳ.	೧೦೧೦	೪೪೪೦೦೦೧೦

ಈ ಪ್ರಾಂತ [illegible] ಬಿಡುಗಡೆಯಾದ ಕಾಗದ [illegible] ಹಿಂದುಸ್ಥಾನದಲ್ಲಿರುವ [illegible] [illegible] ವಿಸ್ತರಿಸಿ, [illegible] ಬಂದವು. [illegible]

ಅದೇ ಕಾಲದಲ್ಲಿ ಪ್ರಜೆಗಳ ಹಿತಕ್ಕೂ, ವ್ಯಾಪಾರ ವೃದ್ಧಿಗೂ, ಸರಕಾರದ ಪ್ರಯೋಜನಕ್ಕೂ ಅನುಕೂಲವಾಗುವಂಥಾ ನಾಲ್ಕು ವಿಶೇಷ ಕಾರ್ಯಗಳು ಉಂಟಾದವು.

೧. [illegible] ಪ್ರಾಂತ್ಯಗಳ ಪ್ರಧಾನ [illegible] ಸಮಸ್ತ ಪಟ್ಟಣಗಳಲ್ಲಿ ವಿದ್ಯಾಶಾಲೆಗಳನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿ, ಆ ಕೆಲಸ [illegible] [illegible].

೨. ಹಿಂದುಸ್ಥಾನದಲ್ಲಿ ಮುಂಚೆ ನಡೆಯುತ್ತಾ ಇದ್ದ ಟಪ್ಪಾಲ್ ಕಟ್ಟಳೆ ನಿಲ್ಲಿಸಿ, ಹಾಸಲು ಬಹಳವಾಗಿ ತಗ್ಗಿಸಿ, [illegible] ಸ್ಥಳಗಳಿಗೆ ಹೋಗುವ ಕಾಗದಗಳಿಗೆ [illegible] [illegible] ಹೋಗುವ ಮುದ್ರೆ ಬಿಲ್ಲೆಗಳನ್ನು, ದೂರದ ಲೆಕ್ಕವನ್ನು ಬಿಟ್ಟು, ಕಾಗದಗಳ ತೂಕದ ಪ್ರಕಾರ ಹಾಕಬೇಕೆಂದು ಅಪ್ಪಣೆ ಕೊಟ್ಟರು. ಈ ಹೊಸ ಪದ್ಧತಿ ಪ್ರಕಾರ ಕಾಗದಗಳನ್ನು ಟಪ್ಪಾಲಿಗೆ ಒಪ್ಪಿಸುವವರು ಅವುಗಳ ತೂಕಕ್ಕೆ ಸರಿಯಾದ ಮುದ್ರೆಯನ್ನು ಹಚ್ಚಬೇಕು. ಹ್ಯಾಗಂದರೆ— ಅವುಗಳ ವಿವರ.—

[illegible]	[illegible]	[illegible]	[illegible]	[illegible]	[illegible]	[illegible]
॥	"	"	"	೧	"	
[illegible]	"	"	"	[illegible]	"	"
೧॥	"	"	"	೩	"	"
೨	"	"	"	೪	"	"

ಈ ಪ್ರಕಾರ ಸರಿಯಾದ ಮುದ್ರೆ ಬಿಲ್ಲೆಗ[illegible] [illegible], ಆ ಕಾಗದ ಹಿಂದುಸ್ಥಾನದಲ್ಲೆಲ್ಲಾ ಎಷ್ಟು ದೂರಕ್ಕೆ ಹೋಗಬೇಕಾದರೂ ಅಷ್ಟು [illegible] ಹೋಗುತ್ತದೆ. ಮುದ್ರೆ ಹಚ್ಚದೆ ಇದ್ದರೂ ಆಗಲಿ, ತೂಕಕ್ಕೆ [illegible] ಮುದ್ರೆ ಬಿಲ್ಲೆ ಹಚ್ಚಿದರೂ ಆಗಲಿ, ಕಾಗದಗಳನ್ನು ರವಾನೆ ಮಾಡಿದರೆ, ಆ ಕಾಗದವನ್ನು ತೆಗೆದುಕೊಂಡವರು ದ್ವಿಗುಣ ಹಾಸಲು ಕೊಡಬೇಕು. ಈ ಪ್ರಕಾರವಾದ [illegible] [illegible] ಪ್ರಜೆಗಳಿಗೂ ಸರಕಾರಕ್ಕೂ ಬಹಳ ಪ್ರಯೋಜನ ಉಂಟಾಗಿ ಇದೆ. ಹ್ಯಾಗಂದರೆ— ಪ್ರಜೆಗಳಿಗೆ ಬಹಳ ಅನುಕೂಲವಾಯಿತು; ಸರಕಾರಕ್ಕೆ ಟಪ್ಪಾಲಿನ ಲೆಕ್ಕ ಬಹಳ ಸುಲಭವಾಯಿತು. [illegible] ಸರಕಾರಕ್ಕೆ ಬರುವ [illegible] [illegible] ಹೆಚ್ಚಾಯಿತು, [illegible] ಕಾಗದಗಳು [illegible] [illegible] ಕೆಲಸ ವರುಷದ ಮೇಲೆ ವರುಷ [illegible] ಹೆಚ್ಚುತ್ತಾ [illegible].

೩. ಬಂಗಾಳ, ಆಗ್ರ, ಮುಂಬಾಯಿ, ಮದ್ರಾಸು ಎಂಬ ನಾಲ್ಕು ಸ್ಥಳಗಳಲ್ಲಿ ರೇಲ್‌ರಾಯ್ಡು ಎಂಬ [illegible] [illegible] ಕಟ್ಟುವದಕ್ಕೆ ಪ್ರಾರಂಭವಾಯಿತು. ರೇಲ್‌ರಾಯ್ಡು ಅಂದರೆ ಗಳ್ಳು ಕಟ್ಟು [illegible] ಇಲ್ಲದ ಸರಾಗ ಮಾರ್ಗದಲ್ಲಿ ಬಂಡಿಗಳ ಚಕ್ರಗಳು ನಡೆಯುವದಕ್ಕೆ [illegible] [illegible] ಕಟ್ಟಿದ [illegible] [illegible] [illegible], [illegible] ಹೋಗುವ [illegible] [illegible] ಬೇಕಾದಷ್ಟು ಬಂಡಿಗಳನ್ನು ಹೂಟ್ಟು ಕೂಡಿ, ಏಕ ಕಾಲದಲ್ಲಿ ಎಳೆಯುವ ಮಾರ್ಗ. ಮದ್ರಾಸಿನಿಂದ [illegible] ಹೋಗುವ [illegible] ಈ [illegible] [illegible] ನಡೆಯುತ್ತವೆ. ಈ ಬಂಡಿಗಳಲ್ಲಿ ಸಾವಿರ ಸಾವಿರ ಜನರೂ ಸಾವಿರಾರು ಮಣ ಸರಕುಗಳೂ ಸಹಿತವಾಗಿ ಎರಡು ತಾಸಿನಲ್ಲಿ ೬೦ ಮೈಲ್ ದೂರವಾದ ಆರಕಾಟಿಗೆ ಮದ್ರಾಸಿನಿಂದ ಹೋಗುತ್ತವೆ.

೪. ೧೮೫೪ನೇ ವರುಷದಲ್ಲಿ ಆಶ್ಚರ್ಯವಾದ ಒಂದು ಹೊಸ ತರವಾದ ವರ್ತಮಾನಯಂತ್ರ ಹಿಂದುಸ್ಥಾನದಲ್ಲಿ [illegible]. ಅದಕ್ಕೆ [illegible] ಇದರು [illegible] ಟಪ್ಪಾಲು [illegible], [illegible] ಇದರು [illegible] ಟಪ್ಪಾಲು [illegible] [illegible] [illegible] ದಾರ. ಅದರ ವಿವರವೇನಂದರೆ— ಈ ಟಪ್ಪಾಲು ನಡೆಯುವ ಮಾರ್ಗದಲ್ಲಿ [illegible] ೨೪೦ ಗಜ [illegible] [illegible] [illegible] ಕಂಬಗಳ ಮೇಲೆ [illegible] [illegible] ೩೦ [illegible] [illegible] [illegible]. [illegible] [illegible] [illegible] [illegible] [illegible] [illegible] [illegible] [illegible] ಪ್ರಸಂಗವ [illegible] [illegible] [illegible] [illegible] ತಗಲುವಂಥಾ [illegible] [illegible] [illegible] [illegible] ಇರುವಂಥಾ ವರ್ತಮಾನದ [illegible] ಇದೆ. ಈ ಟಪ್ಪಾಲಿನ ಮುಖಾಂತರ [illegible] [illegible] [illegible] ಮಾನ ಹೋಗುವ ರೀತಿ ಹ್ಯಾಗಂದರೆ— [illegible] [illegible] [illegible] ಕಚೇರಿಗಳಲ್ಲಿ ಇರುವ ವರ್ತಮಾನ [illegible] [illegible] ಗಲುವ ತಂತಿಗೆ [illegible] [illegible] [illegible] [illegible]

ತ್ರದಲ್ಲಿ ಹುಟ್ಟುವ ಅಗ್ನಿ ಸೇರಿದರೆ, ವರ್ತಮಾನ ಪ್ರಸಂಗವಾಗತಕ್ಕ ಯೆರಡು ಟಪ್ಪಾಲುಕಚೇರಿಗಳ ವರ್ತಮಾನ ಮೇಜುಗಳಿಗೆ ಗಲ್‌ವನಿಕ್ ಯೆಂಬ ಅಗ್ನಿಯು ಅನ್ಯೋನ್ಯ ಹುಟ್ಟುತ್ತದೆ. ಈ ಪ್ರಕಾರವಾಗಿ ಅನ್ಯೋನ್ಯವಾದ ಯೆರಡು ತಂತಿ ಟಪ್ಪಾಲುಕಚೇರಿಗಳ ವರ್ತಮಾನಮೇಜುಗಳಲ್ಲಿ ಇರುವ, ಯಾವಾಗಲೂ ತಾನಾಗಿಯೇ ಉತ್ತರದಿಕ್ಕು ನೋಡುವ, ಅಯಃಕಾಂತ ಛಾಯಿತವಾದ ಸೂಜಿಗಳನ್ನು, ಅವುಗಳಿಗೆ ಅತ್ತಯಿತ್ತಲು ಇಟ್ಟು ಇರುವಂಥಾ ಗಲ್‌ವನಿಕ್ ಯೆಂಬ ಅಗ್ನಿಪ್ರವಾಹವು ಸೇರಿದರೆ, ಅಯಃಕಾಂತ ಛಾಯೆ ಹೊಂದುವಂಥಾ ಯೆರಡು [illegible] ಅಲುಗುಗಳ ಮೂಲವಾಗಿ ಯೆರಡು ಟಪ್ಪಾಲುಕಚೇರಿಗಳು ಯಷ್ಟು ದೂರ ಇದ್ದಾಗ್ಯೂ, ವೊಂದೇ ಸಮಯದಲ್ಲಿ ವೊಂದೇ ಪ್ರಕಾರವಾಗಿ ಯಡ ಬಲ ಪಾರ್ಶ್ವಗಳಿಗೆ ತಿರುಗಿಸಬಹುದು. ಹೀಗೆ ಇರಲಾಗಿ ವೊಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ಕಳುಹಿಸಬೇಕಾದ ವರ್ತಮಾನದ ಶಬ್ದಗಳ ಅಕ್ಷರಗಳ ಹೊಂದೊಂದನ್ನು ಕ್ರಮದಿಂದ ತಂತಿಟಪ್ಪಾಲುಕಚೇರಿಗಳ ವರ್ತಮಾನಮೇಜುಗಳಲ್ಲಿ ಇರುವ ಅಯಃಕಾಂತ ಸೂಜಿಗಳ ಚಲನೆಯಿಂದ ಸೂಚಿಸುತ್ತಾರೆ. ಹ್ಯಾಗಂದರೆ—ವರ್ತಮಾನ ತಿಳಿಸುವವನು ತನ್ನ ಕಚೇರಿಯ ಮೇಜಿನ ಅಯಃಕಾಂತ ಸೂಜಿಯನ್ನು ಯಾವ ಮೇರೆಗೆ ಅತ್ತ ಇತ್ತಲು ತಿರುಗಿಸುತ್ತಾನೋ, ಅದೇ ಮೇರೆಗೆ ಅನ್ಯೋನ್ಯವಾದ ಕಚೇರಿಯ ವರ್ತಮಾನ ಮೇಜಿನಲ್ಲಿ ಇರುವ ಅಯಃಕಾಂತ ಸೂಜಿಯು ಅದೇ ಸಮಯದಲ್ಲಿ ಅತ್ತ ಇತ್ತಲಾಗಿ ಅಲ್ಲಾಡುತ್ತದೆ. ವರ್ತಮಾನವನ್ನು ಹೊಂದುವ ಕಚೇರಿಯವರು ತಮ್ಮ ಮೇಜಿನ ಸೂಜಿ ಚಲನೆಯನ್ನು ನೋಡಿ, ಅದರಲ್ಲಿ ಕಾಣುವ ಅಕ್ಷರಸಂಜ್ಞೆಗಳನ್ನು ತಿಳಿದು, ಆಯಾ ಅಕ್ಷರಗಳ [illegible]ಗದದಲ್ಲಿ ಬರದು, ಹೀಗೆ ತಿಳಿದ ವರ್ತಮಾನವನ್ನು ಮುಟ್ಟಿಸ ಬೇಕಾದ ಜನರಿಗೆ ಮುಟ್ಟಿಸುತ್ತಾರೆ. ಈ ಮಾರ್ಗವಾಗಿ ವರ್ತಮಾನವನ್ನು ಕಳುಹಿಸುವವರು ೧೬ ಶಬ್ದಕ್ಕೆ ಮೀರದ ವರ್ತಮಾನಕ್ಕೆ ೪೦೦ ಮೈಲ್ ದೂರಕ್ಕೆ ೧ ರು.

೮೦೦	"	" ೨	"
೧೨೦೦	"	" ೩	"
೧೬೦೦	"	" ೪	"

ಮೇರೆಗೆ ತೆರಬೇಕು. ೧೬ ಶಬ್ದಕ್ಕಿಂತ ಹೆಚ್ಚಾಗಿ ೨೪ ಶಬ್ದದ ವೊಳಗಾಗಿ ಇರುವ ವರ್ತಮಾನಕ್ಕೆ ೧॥ ರೂಪಾಯಿ ಕೊಡಬೇಕು. ೩೨ ಶಬ್ದದೊಳಗಿನ ಸಮಾಚಾರಕ್ಕೆ ೨ ರೂಪಾಯಿ ೪೦೦ ಮೈಲಿಗೆ ಕೊಡಬೇಕು. ಈ ಮೊದಲಾದ ಮಹತ್ಕಾರ್ಯಗಳು ಕಳೆದ ವರುಷದ ಮಾರ್ಚಿ ೩೦ಗಳ ಪರ್ಯಂತ ಆಳಿದ ಗವರ್ನರ್ ಜನರಲ್ ದಲ್‌ಹೌಸಿ ಬಹದ್ದರವರ ದಿನದಲ್ಲಿ ನಡದವು.

ಈಗ ರಾಜ್ಯಭಾರ ಮಾಡಿಕೊಂಡು ಇರುವ ಲಾರ್ಡ್ ಕನಿಂಗ್ ಬಹದ್ದರವರು ಹಿಂದುಸ್ಥಾನದಲ್ಲೆಲ್ಲಾ ದಲ್‌ಹೌ[illegible] ಸಾಹೇಬ ಬ[illegible]ದ್ದರವರ ಮುಖಾಂತರ ಹೋಗಿ ಪ್ರಬ[illegible]ಬಂದ ಕುಂಪಿನಿ ಸರಕಾರದ ರಾಜ್ಯವನ್ನು ಆಳುವ ಉ[illegible]ಗದಲ್ಲಿ ಸೇರುವಾಗ, ಯುದ್ಧವಿಲ್ಲದೆ ಸಮಾಧಾನವಾಗಿ ಕುಂಪಿನಿ ಸರಕಾರದ ಸಾಂಪ್ರಾಜ್ಯವನ್ನು ನಡಿಸಬಹುದೆಂದು ನೆನಸಿದರು. ಆದರೆ [illegible] ಬಂದ ಕೂಡಲೆ, ಫಾರಸೀ ದೇಶದ ಅರಸನು [illegible]ಸರಕಾರಕ್ಕೆ ಮಿತ್ರನಾದ ದೋಸ್ತ ಮಹಮ್ಮದನ ಕಾಬೂಲ್‌ದೇಶಕ್ಕೆ ಸಮೀಪವಾದ ಹಿರಾತ್‌ಪಟ್ಟಣಕ್ಕೆ ದಂಡು ಕಳುಹಿಸಿ ಮುತ್ತಿಗೆ ಹಾಕಿಸಿದ್ದರಿಂದ, ವಾಗ್ವಾದ ಉಂಟಾಯಿತು. ಫಾರಸೀ ರಾಜನು ಹಿರಾತ್‌ಪಟ್ಟಣದ ಮುತ್ತಿಗೆ ತೆಗದು ದಂಡನ್ನು ಹಿಂದಕ್ಕೆ ತರಿಸಿಕೊಳ್ಳುವದಕ್ಕೆ ವಪ್ಪದೆ, ಕುಂಪಣಿಸರಕಾರದೊಂದಿಗೆ ಮುಂಚೆ ಮಾಡಿಕೊಂಡ ಕರಾರಿಗೆ ವಿರೋಧವಾಗಿ ನಡದದ್ದರಿಂದ, ಲಾರ್ಡ್ ಕನಿಂಗ್ ಸಾಹೇಬ ಬಹದ್ದರವರು ಅವನ ಮೇಲೆ ಯುದ್ಧ ಮಾಡಬೇಕೆಂದು ನಿಶ್ಚೈಸಿ, ದೋಸ್ತ ಮಹಮ್ಮದನಿಗೆ ಹಣ ಮದ್ದು ಗುಂಡು ಮುಂತಾದ ಸರಂಜಾಮುಗಳನ್ನು ಕಳುಹಿಸಿ, ಫಾರ[illegible]ಶವನ್ನು ವಾಳನುಗ್ಗುವದಕ್ಕೆ ಮುಂಬಾಯಿ ಕ್ಯಾರಿ[illegible]ದ ೧೦೦೦೦ ಮ[illegible] ದಂಡನ್ನು ಸಮುದ್ರದ ಮಾರ್ಗವಾಗಿ ಫಾರಸೀ[illegible]ದ ದಕ್ಷಿಣಭಾಗಕ್ಕೆ ಕಳುಹಿಸಿ, ದೇಶವನ್ನು ವಾಳನುಗ್ಗಿ, ರಾಜನನ್ನು ದಂಡಿಸಬೇಕೆಂದು ಅಪ್ಪಣೆ ಕೊಟ್ಟರು. ಈ ದಂಡು ಬುಶೀರ್ ಯೆಂಬಲ್ಲಿ ಲಡಾಯಿ ಮಾಡಲಾಗಿ, ಬುಶೀರ್‌ಪಟ್ಟಣವು ಕೈವಶವಾಯಿತು ಯೆಂಬ ನಿಶ್ಚಯ ವರ್ತಮಾನ ಬಂದದೆ.

ಆಸ್ಯಾ ಖಂಡದಲ್ಲಿ ಇರುವ ಅಂಗ್ಲಸಾಂಪ್ರಾಜ್ಯವು ಹಿಂದುಸ್ಥಾನವನ್ನೆಲ್ಲಾ ಆವರಿಸಿದ ಮೇಲೆ, ಅದರ ಆಚೆ ಇರುವ ದೇಶಗಳನ್ನು ಸಹಾ ವಶಕೊಳ್ಳುವ ಹಾಗೆ ಕಾಣುತ್ತದೆ.

ಪುನರ್ವಿವಾಹ.

REMARRIAGE OF WIDOWS.

ಎಲ್ಲಾ ದೇಶಗಳಲ್ಲಿಯೂ ಜನಾಂಗಗಳಲ್ಲಿಯೂ ಸ್ವಾಭಾವಿಕವಲ್ಲದ ನೇಮಗಳೂ ಮರ್ಯಾದೆಗಳೂ ಬೇರೆಯಾಗುತ್ತ ಬಂದವು. ದೇವರು ಮನುಷ್ಯರನ್ನು ಉಂಟು ಮಾಡುವ ಸಮಯದಲ್ಲಿ ಅನ್ಯಾಯವೂ ಅನೀತಿಯೂ ಈ ಭೂಮಿಯಲ್ಲಿ ನಡೆಯಲಿಲ್ಲ. ಮನುಷ್ಯರು ಸತ್ಯವಾದ ಒಬ್ಬನೇ ದೇವರನ್ನು ಆರಾಧಿಸುವವರಾಗಿ, ಆತನ ಚಿತ್ತದ ಪ್ರಕಾರ ಎಲ್ಲಾ ವಿಷಯದಲ್ಲಿಯೂ ನಡೆದುಕೊಂಡರು. ಆದರೆ ದೇವರ ಚಿತ್ತವನ್ನು ಮೀರಿ, ಮನುಷ್ಯರು ಪಾಪ ಮಾಡಿದಂದಿನಿಂದ, ದೇವರಿಗೆ ವಿರೋಧವಾದ ನ್ಯಾಯಗಳೂ ಕ್ರಮಗಳೂ ಧರ್ಮಗಳೂ ವಿಧಿಗಳೂ, ಸ್ವಭಾವಕ್ಕೆ ವಿರೋಧವಾದ ಮರ್ಯಾದೆಗಳೂ ನಡೆಗಳೂ ಹುಟ್ಟಿದವು. ದೇವರು ಮನುಷ್ಯನಿಗೆ ಕೊಟ್ಟ ನಿಜ್ಞಾನದ ಬೆಳಕು ಅರೂಪವಾದ್ದರಿಂದ ಕೆಟ್ಟದ್ದಕ್ಕೆ ಒಳ್ಳೇದೆಂತಲೂ, ಒಳ್ಳೇದಕ್ಕೆ ಕೆಟ್ಟದೆಂತಲೂ; ನ್ಯಾಯಕ್ಕೆ ಅನ್ಯಾಯವೆಂತಲೂ, ಅನ್ಯಾಯಕ್ಕೆ ನ್ಯಾಯವೆಂತಲೂ ಹೇಳುವದಾಯಿತು. ಸಮಸ್ತವನ್ನು ಉಂಟು ಮಾಡಿದ ದೇವರು ಒಬ್ಬನು ಮಾತ್ರವೇ ಆರಾಧನೆಗೆ ಯೋಗ್ಯವಾಗಿದ್ದರೂ, ಆತನನ್ನು ಬಿಟ್ಟು, ಕಲ್ಪನೆಯ ದೇವತೆಗಳನ್ನೂ ಪಿಶಾಚಿ ಭೂತಾದಿಗಳನ್ನೂ ಕೈಯಿಂದ ಮಾಡಿದ ವಿಗ್ರಹಾದಿಗಳನ್ನೂ ಆರಾಧಿಸುತ್ತಾರೆ. ಈ ಪ್ರಕಾರ ನಡೆಯುವಲ್ಲಿ ಸಕಲವೂ ದೇವರಿಗೆ ವಿರೋಧವಾದ ನಡತೆಗಳೂ ಪರಸ್ಪರ ಸಂಬಂಧದ ಮಮತೆಯೂ ಯೋಗ್ಯವಾದ ಜ್ಞಾನಭೇದಗಳೂ ಗಲಿಬಿಲಿಯಾಗಿ [illegible] ಆತನ್ನಪಲ್ಲಿ. ಮನುಷ್ಯರು ತಮ್ಮ ತಮ್ಮ ಸ್ಥಾನದಲ್ಲಿ ನಿಂತು, ಸ್ವಸ್ವಂತಾನ್ಯಷಮಿದ [illegible] ಕೆಲಸಗಳನ್ನು ಮಾಡುವದಕ್ಕೆ ಉಪಾಯವಿಲ್ಲದೆ, ಒಬ್ಬರು ಒಬ್ಬರನ್ನು ದಾಸರಾಗಿ ಮಾಡಿ, ಸ್ವಭಾವದ ಪ್ರಕಾರ ಇರತಕ್ಕ ಪ್ರೀತಿಯನ್ನು ದಯೆಯನ್ನೂ ಕರುಣೆಯನ್ನೂ ಬಿಟ್ಟು, ಕೆಲವರು ಮನುಷ್ಯರಿಗಿಂತ ನೀಚವಾದ ಪಶುಗಳ ಹಾಗೆ ಬಲಾತ್ಕರಿಸುವದ ನಡಿಸಲಾರಂಭಿಸಿದರು. ಪಶುಗಳಂತೆ ಒಬ್ಬರೊಬ್ಬರು ದಾಸರಾಗಿ ಮಾರಿದರು. ಮತ್ತು ಕೆಲವರನ್ನು ಯಜಮಾನರು ಕಠಿಣ ಮನಸ್ಸಿನಿಂದ [illegible] ಹಿಂಸಿಸುತ್ತಾರೆಂಬದನ್ನು [illegible] ರದು.

ಮನುಷ್ಯರಲ್ಲಿ ಸ್ವಭಾವದಿಂದ ಗಂಡಸರಿಗೆ ಪ್ರಾಬಲ್ಯವೂ ಅಧಿಕಾರವೂ ಹೆಚ್ಚು, ಹೆಂಗಸರಿಗೆ ಕಡಿಮೆ. ನ್ಯಾಯಗಳನ್ನೂ ಮರ್ಯಾದೆಗಳನ್ನೂ ಮಾಡಿದವರು ಹೆಚ್ಚಾಗಿ ಗಂಡಸರು. ದೇವರ ಚಿತ್ತದ ಪ್ರಕಾರ ಗಂಡಸು ಮನೆಯಲ್ಲಿ ಯಜಮಾನನಾಗಿಯೂ, ಹೆಂಡತಿಯು ಯಜಮಾನಿಯಾಗಿಯೂ ಇರುವದು ನ್ಯಾಯ. ಗಂಡನೂ ಹೆಂಡತಿಯೂ ಪ್ರೀತಿಯಲ್ಲಿ ಐಕ್ಯವಾಗಿ, ಇಬ್ಬರೂ ಹೊಂದಿಕೆಯಾಗಿ ನಡಕೊಳ್ಳತಕ್ಕದ್ದು. ಆದರೆ ಗಂಡಸರು ಹೆಂಗಸರ ಸ್ವತಂತ್ರವನ್ನು ಮೋಸವಾಗಿ ಕಸಕೊಂಡು ಬಿಟ್ಟು, ತಮ್ಮ ಸ್ವತಂತ್ರವನ್ನೂ ಅಧಿಕಾರವನ್ನೂ ಮಾತ್ರವೇ ಪ್ರಬಲ ಮಾಡಲಿಕ್ಕೆ ನೋಡಿದರು. ಈ ಪ್ರಕಾರ ಸತ್ಯದೇವರ ಜ್ಞಾನವಿಲ್ಲದ ಸಮಸ್ತ ಜನಾಂಗಗಳಲ್ಲಿಯೂ ಹೀಗೆ ನಡೆಯಿತು, ಇನ್ನೂ ನಡೆಯುತ್ತದೆ.

ಈ ಹಿಂದುಸ್ಥಾನದಲ್ಲಿ ಹೊಲೆಯರೆಂಬವರು ಬಹುಕಾಲದಿಂದ ದಾಸತ್ವದಲ್ಲಿದ್ದರು. ಕ್ರೈಸ್ತರಾದ ಇಂಗ್ಲೀಷ ಸರಕಾರದವರು ಈ ದೇಶವನ್ನು ಆಳಲಿಕ್ಕೆ ತೊಡಗಿದ ಮೇಲೆ, ದಾಸತ್ವವು ದೇವರಿಗೂ ಮನುಷ್ಯಪ್ರೀತಿಗೂ ವಿರೋಧವಾಗಿರಲಾಗಿ, ದಾಸತ್ವವನ್ನು ಹಿಂದುಸ್ಥಾನದಲ್ಲೆಲ್ಲಾ ನಿಲ್ಲಿಸಿ ಬಿಟ್ಟರು. ಆದರೆ ದಾಸತ್ವವೆಂಬ ಹೆಸರಿಲ್ಲದೆ ಇದ್ದರೂ, ದಾಸತ್ವದಲ್ಲಿ ಇರುವ ಹೆಂಗಸ[illegible]ಯನ್ನು ಸಮ ಮಾಡುವದಕ್ಕೆ ಸರಕಾರದವರ ಅಪ್ಪಣೆ ಸಾಲದು. ಮನುಷ್ಯರಕ್ಷಕನಾದ ಯೇಸು ಕ್ರಿಸ್ತನ ಸುವಾರ್ತೆಯನ್ನು ಪ್ರಸಂಗಿಸಿ, ಸುಳ್ಳು ದೇವತೆಗಳಿಂದಲೂ ಮಾನವಕೃತ ವಿಗ್ರಹಗಳಿಂದಲೂ ಬೇರ್ಪಡಿಸಿ ಸತ್ಯದೇವರ ಕಡೆಗೆ ಈ ದೇಶಸ್ಥರನ್ನು ತಿರುಗಿಸ ಅಪೇಕ್ಷಿಸಿ ಬಂದ ಕ್ರಿಸ್ತಬೋಧಕರ ಪ್ರಯತ್ನಗಳಿಂದ, ನ್ಯಾಯ ಅನ್ಯಾಯದ ವಿವೇಕವೂ ಸತ್ಯಅಸತ್ಯದ ಜ್ಞಾನವೂ ಪಾಪಗಳಿಂದ ಆಗುವ ರಕ್ಷಣೆಯ ಮಾರ್ಗವೂ ಅನೇಕರಿಗೆ ತಿಳಿ[illegible] ಸುಮಾರು ಹತ್ತು ಲಕ್ಷ ಜನರು ಹಿಂದುಸ್ಥಾನ[illegible] ಕ್ರಿಸ್ತರಾದರು. ಅನೇಕ ವಿಘ್ನಗಳು ಪ್ರಬಲವಾದವು. ಅನೇಕರಲ್ಲಿ ಹೆಂಗಸರ ನಡತೆಯಲ್ಲಿ ಪ್ರೇಮಯು ಕಡಿಮೆಯಾಯಿತು. ಕ್ರಿಸ್ತರಾಗದ ಹಿಂದುಜನರು [illegible] ಕ್ರಿಸ್ತನನ್ನೂ ಕ್ರಿಸ್ತನ ಬೋಧನೆಯನ್ನೂ ಕ್ರಿಸ್ತ[illegible]

ನ್ನು ಕ್ರೈಸ್ತಮರ್ಯಾದೆಗಳನ್ನೂ ನೋಡಿ ಆಲೋಚಿಸಿ, ಹಿಂದುಮರ್ಯಾದೆಗಳಲ್ಲಿ ಸ್ವಭಾವಕ್ಕೂ ನ್ಯಾಯಕ್ಕೂ ವಿರೋಧವಾದದ್ದನ್ನು ಕಡಿಮೆ ಮಾಡುವದಕ್ಕೂ ಬಿಟ್ಟುಬಿಡುವದಕ್ಕೂ ಪ್ರಯತ್ನ ಮಾಡ ತೊಡಗಿದರು. ಹಾಗೆಯೇ ಬಂಗಾಳ ದೇಶದ ಒಳ್ಳೇ ಗೃಹಸ್ಥರು ಹಿಂದು ವಿಧವೆಗಳ ಸಂಕಷ್ಟಗಳನ್ನೂ ಅವಮಾನವನ್ನೂ ತಾಳತಕ್ಕದಲ್ಲವೆಂತ ಗ್ರಹಿಸಿ, ಇಷ್ಟುವರೆಗೆ ಹಿಂದುಸ್ಥಾನದಲ್ಲಿ ನಡದು ಬಂದ ಪ್ರಕಾರ ಮೇಲು ಜಾತಿಯವರ ವಿಧವೆಗಳಿಗೆ ಪುನರ್ವಿವಾಹ ಆಗ ಕೂಡದೆಂಬ ಕಟ್ಟಳೆಯನ್ನು ಬಿಡಬೇಕೆಂತ ತಂಮಲ್ಲಿ ನಿಶ್ಚಯಿಸಿಕೊಂಡರು.

ಕುಂಪಣೀಸರಕಾರಕ್ಕೆ ಒಳಗಾಗಿರುವ ಸಮಸ್ತ ಹಿಂದುಸ್ಥಾನದ ಕಾನೂನುಗಳನ್ನು ಮಾಡುವ ನ್ಯಾಯದಾಯಕ ಯೆಂಬ ಸಭೆಯು ಕಲ್ಕತ್ತಾರಾಜಧಾನಿಯಲ್ಲಿ ಇರುತ್ತದೆ. ಈ ಸಭೆಯವರ ಅಪ್ಪಣೆಯಿಂದ ಈ ದೇಶದಲ್ಲಿ ನಡಿಯುವ ಅನೇಕ ಅನ್ಯಾಯಗಳು ನಿಂತು ಹೋದವು. ಬಹಳ ಕಡೆಯಲ್ಲಿ ದೇವಸ್ಥಾನಗಳ ಗೋಡೆಗಳಿಗೂ ತೇರುಗಳಿಗೂ ಬೇರೆ ಸ್ಥಳಗಳಲ್ಲಿಯೂ ಬಹಳ ನಾಚಿಕೆಯ ಗೊಂಬೆಗಳೂ ಚಿತ್ರಗಳೂ ಮಾಡಿ ಇಡುವದಿತ್ತು. ಅದು ಒಳ್ಳೇ ಮರ್ಯಾದೆಗೆ ಕೇಡಾಗಿರುವದರಿಂದ, ಈ ನ್ಯಾಯದಾಯಕಸಭೆಯವರು ಅಂಥಾ ಗೊಂಬೆಗಳನ್ನೂ ಚಿತ್ರಗಳನ್ನೂ ಮಾಡುವದು ನಿಲ್ಲಿಸಿದರು. ಈಗ ಯಾರಾದರೂ ಅಂಥಾದ್ದನ್ನು ಯಲ್ಲಾದರೂ ಮಾಡಿ ಇಟ್ಟ ಪಕ್ಷದಲ್ಲಿ, ಅದನ್ನು ಸರಕಾರದವರಿಗೆ ತಿಳಿಸಿದ್ದಾದರೆ, ಅಂಥಾ ಗೊಂಬೆಗಳನ್ನೂ ಚಿತ್ರಗಳನ್ನೂ ಮಾಡಿ ಇಡುವವರಿಗೆ ಜುಮಾರ್ನೆಯೂ ಬಂಧನವೂ ಆಗುತ್ತದೆ.

ಬಂಗಾಳದಲ್ಲಿರುವ ಗೃಹಸ್ಥರು ಈ ಸಭೆಯವರ ಪರಿಮುಖವಾಗಿ ಹಿಂದುಜನರ ಕುಟುಂಬಗಳಲ್ಲಿ ಕ್ಷೇಮವೂ ಸೌಖ್ಯವೂ ಹೆಚ್ಚಾಗುವದಕ್ಕೆ ಉಪಾಯ ಉಂಟೆಂತ ನೋಡಿ, ಆ ನ್ಯಾಯದಾಯಕಸಭೆಯವರಿಗೆ ಅರ್ಜಿ ಬರದು, ಇನ್ನುಮುಂದೆ ಬ್ರಾಹ್ಮಣ ಮುಂತಾದವರ ವಿಧವೆಗಳಿಗೆ ಪುನರ್ವಿವಾಹವಾದಲ್ಲಿ, ಅವರ ಜಾತಿ ಹೋಗದ ಹಾಗೆಂಯೂ, ಅಂಥಾ ವಿಧವೆಗಳಲ್ಲಿ ಹುಟ್ಟುವ ಮಕ್ಕಳಿಗೆ ಸ್ವತಂತ್ರ ಬಾಧ್ಯಸ್ಥಿಕೆ ಇತ್ಯಾದಿ ಇರುವ ಹಾಗೆಯೂ ಅಪ್ಪಣೆ ಆಗಬೇಕಾಗಿ ಬೇಡಿಕೊಂಡರು. ವಿಧವೆಗಳ ಪುನರ್ವಿವಾಹಕ್ಕೆ ವೇದಗಳೂ ಧರ್ಮಶಾಸ್ತ್ರಗಳೂ ವಿರೋಧವಾಗಿರುವದಿಲ್ಲವೆಂತ ಪ್ರಮಾಣಿಸಿ ತೋರಿಸಿದರು. ಆ ಪ್ರಕಾರ ನ್ಯಾಯದಾಯಕಸಭೆಯವರು, ಈ ಕಾರ್ಯವು ಹಿಂದುಜನರಿಗೆ ಒಳ್ಳೇದೆಂತ ಕಂಡು, ಆ ವಿಷಯದಲ್ಲಿ ಆಲೋಚನೆ ಮಾಡಿ, ಆ ಗೃಹಸ್ಥರ ಅಪೇಕ್ಷೆ ಪ್ರಕಾರ ಆಗ ಬೇಕೆಂತ ಅಪ್ಪಣೆ ಕೊಟ್ಟರು.

ಅಪೇಕ್ಷಿಸಲಿಕ್ಕೆ ಅಪೇಕ್ಷಿಸಿದರೂ, ಅನೇಕ ಶತ ವರುಷಗಳಿಂದ ನಡದು ಬಂದ ಮರ್ಯಾದೆಯನ್ನು ಬಿಟ್ಟು, ಯಾರಾದರು ಲೋಕಾಪವಾದಕ್ಕೆ ಹೆದರದೆ, ವಿಧವೆಯನ್ನು ಮದುವೆ ಮಾಡಿಕೊಂಡಾರೋ ಯೆಂಬ ವಿಷಯದಲ್ಲಿ ಸಂಶಯವಿತ್ತು. ಆದರೆ ಆ ಕಾನೂನು ಆದಂದಿನಿಂದ ಕೆಲವು ವಿಧವೆಗಳ ಪುನರ್ವಿವಾಹಗಳಾದವು. ಕಳದ ೧೮೫೬ ನೇ ಇಸವಿ, ದಶಂಬರ ತಾರೀಕು ೭ ನೇ, ಆದಿತ್ಯವಾರ ದಿವಸ, ಬಂಗಾಳದೇಶದ [illegible] ರ ಅರಸನ ಬ್ರಾಹ್ಮಣ ಪುರೋಹಿತನ ವಿಧವೆಯ [illegible] ಮಗಳಿಗೂ ಅಲ್ಲಿಯ ಬ್ರಾಹ್ಮಣರಲ್ಲಿ ಶ್ರೇಷ್ಠ ಕುಲದವನಾದ ಶ್ರೀಶ್ಚಂದ್ರಶರ್ಮ ಯೆಂಬ ಕುಲೀನಬ್ರಾಹ್ಮಣನಿಗೂ ಕಲ್ಕತ್ತಪಟ್ಟಣದಲ್ಲಿ ಮದುವೆಯಾಯಿತು. ಅದೇನಾದರೂ ಗೋಪ್ಯದಲ್ಲಿ ನಡಿಯಲಿಲ್ಲ; ಬ್ರಾಹ್ಮಣರೂ ಬೇರೆ ಮೇಲು ಜಾತಿಯವರೂ ಹೆಚ್ಚಾಗಿ ಸುಮಾರು ಯೆರಡು ಸಾವಿರ ಜನರು ಆ ಲಗ್ನಕ್ಕೆ ಬಂದಿದ್ದರು. ಅವರ ಹೊರತು ಮನೆಯಲ್ಲಿ ಸ್ಥಳ ಸಾಲದೆ, ಕೆಲವು ಸಾವಿರ ಮಂದಿ ಈ ಹೊಸತಾದ ಕಾರ್ಯವನ್ನು ನೋಡುವ ಬಗ್ಗೆ ಹೊರಗೆ ನಿಂತಿದ್ದರು. ಲಗ್ನದ ಆಚಾರಗಳು ನಡದಾದ ಮೇಲೆ ಗೀತಗಳನ್ನು ಹಾಡಿದರು, ಪ್ರಾರ್ಥನೆಗಳನ್ನು ಮಾಡಿದರು, ಈ ಸಂಗತಿ ವಿಷಯದಲ್ಲಿ ತರ್ಕಗಳನ್ನು ನಡಿಸಿದರು. ಕಡೆಯಲ್ಲಿ ಮದುಮಗನಾದ ಪಂಡಿತ ಶ್ರೀಶ್ಚಂದ್ರನಿಗೂ, ಹಿಂದುಸ್ಥಾನದ ಸರ್ವಾಧಿಪತಿಯಾದ ಕೆನ್ನಿಂಗ್ ಪ್ರಭುವಿಗೂ, ಇವರ ಪತ್ನಿಗೂ, ಬಂಗಾಳದ ಸಹಾಯಾಧಿಪತಿಗೂ, ನ್ಯಾಯದಾಯಕಸಭೆಯಲ್ಲಿ ಪುನರ್ವಿವಾಹದ ವಿಷಯ ಪ್ರಯತ್ನ ಪಟ್ಟ ಗ್ರಾಂತಧಾರೆಗೂ, ನ್ಯಾಯದಾಯಕಸಭೆಯವರೆಲ್ಲರಿಗೂ ಶುಭವಾಗಲೆಂದು ಹೇಳಿ, ಸಂತೋಷದಿಂದ ಈ ಲಗ್ನಕಾರ್ಯವನ್ನು ತೀರಿಸಿದರು.

ಒಂದು ಆಗುವದೇ ತಡ, ಮತ್ತೆ ಬೇರೊಬ್ಬರು ಸಹಾ ಅದರಿಂದ ಧೈರ್ಯ ತಕೊಂಡು ಹಾಗೆಯೇ ಮಾಡುತ್ತಾರೆ. ಮರುದಿವಸ, ಅಂದರೆ ಅದೇ ದಶಂಬರ ತಾರಿ

[illegible] ನೇ ವಯಸ್ಸಿನಲ್ಲೇ, ಬಾಬು [illegible] [illegible] ಬಾಬು [illegible]ಯೊಡ ನೆಗಳನ್ನು ಮದುವೆ ಮಾಡಿಕೊಂಡನು. ಇವರು ಬ್ರಾಹ್ಮಣರಲ್ಲಿ [illegible] ಇಷ್ಟು ಮಂದಿ ಪತ್ನಿಗಳ [illegible] ಅವರಲ್ಲಿ ಸಹಾ [illegible]ಲ್ಲಿ. ಈ [illegible] ಸಹಾ ಬಹಳ [illegible] ಜನರಾಗಿದ್ದಾರೆ. ಈ [illegible]ನಲ್ಲಿಯೂ ಮದುವೆಯ ಕಷ್ಟವನ್ನು [illegible]ವದಕ್ಕೆ ಕೆಲವು ಸಾವಿರ ಮಂದಿ ಕೂಡಿ ಬಂದಿದ್ದರು.

ಅನೇಕ ಹಿಂದು ಜನರು ಇಂಥಾ ನಡತೆಗಳನ್ನು ಕೇಳಿ,–ಇದು ಕಲಿಯುಗದ ಮಹಾತ್ಮೆ. ಈ . ಯುಗದ ಅಂತ್ಯ ಬಂತು, ಯೆಂಬದಾಗಿ ಹೇಳುತ್ತಾರೆ, [illegible]ತ್ತಾರೆ. ಆದರೆ ನಮಗೆ ತೋರುವದೇನಂದರೆ,– ಇದು ಕಲಿಯುಗದ ಮಹ [illegible]ಲ್ಲ; ದೇವರ ವಾಕ್ಯದ ಮಹಿಮೆ [illegible] [illegible] [illegible] ಮಿಷನರಿಗಳಿಂದ ನಮಗೆ ಬಂ[illegible]. ನಮ್ಮ ಹಿಂದೂಸ್ಥಾನದಲ್ಲಿ ನಡೆಯುವಂಥಾ, ಶಾಸ್ತ್ರಗಳು ಯೋಚಿಸದಂಥಾ ಮರ್ಯಾದೆಗಳನ್ನು ಶಾಸ್ತ್ರ ಪ್ರಕಟವಾಗಿ [illegible] ಬಿಟ್ಟಿದ್ದಾರೆ? ಆದರೆ ಈ ಪ್ರಕಾರ ಹಿರಿಯರ ಮರ್ಯಾದೆಗಳನ್ನು ಹಾಗಾಗೆ ಬಿಡುತ್ತಾ ಬಂದರೆ, ಮತ್ತೆ ಹಿಂದು ಧರ್ಮಯಲ್ಲಿ ಉಳಿದ್ದೇನು? ಬ್ರಹ್ಮಸಮಾಜದ ರೀತಿ ಯೆನಾದ್ರೆತು? ಎಂಬಂತಾ ಹೇಳುತ್ತಾರೆ. ಆದರೆ ಕತ್ತಲೆಯೂ ಬೆಳಕು [illegible] [illegible]; ಆದ್ದರಿಂದ [illegible] ಬಹುಕಾಲದಿಂದ ನಡೆದು ಬಂದ ಮರ್ಯಾದೆಗಳು ದೇವರ ವಾಕ್ಯದ ಬಲದಿಂದ ಬಿದ್ದು ಹೋಗುವವೆಂಬು ನಮಗೆ ನಿಶ್ಚಯ ತೋರುತ್ತದೆ. ಆದರೆ ಅಂಥಾ ಮರ್ಯಾದೆಗಳು ನಿಂತು ಹೋಗುವದರಿಂದ, ಹಿಂದೂ ಸಹ ಜನರಿಗೆ ಬಹಳ ಹಾನಿಯೇನು? ಈ [illegible] ಶಾಸ್ತ್ರ [illegible] [illegible]. ಗಂಡಸರು ಹೊಂದಿ[illegible] ಸತ್ತರೆ ಮದುವೆ ಮಾಡಿಕೊಳ್ಳಬಹುದಂತೆ; ಹೆಂಗಸರು ಮಾತ್ರ ಗಂಡ ಸತ್ತರೆ ಮರುವೆ ಮಾಡಿಕೊಳ್ಳಬಾರದಂತೆ; [illegible] ಆದ ಮೇಲೆ ಹೆಂಗಸರು ಮಾಡಿದ್ದರೆ ಅವರು ಬಾಲ್ಯವಿಧವೆಯರಾಗಿ, ವಿಧ್ಯಾಹೀನರಾಗಿ, ಬುದ್ಧಿಯಲ್ಲಿ [illegible] [illegible]

[illegible]—[illegible] ಬಾಲ್ಯವಿಧವೆಯರಾದ [illegible] ಬಾಲ್ಯವಿಧವೆಯರ [illegible] ವೆ[illegible] ಮಾತ್ರ [illegible] ಪ್ರಕಾರ ಹೊಂದಬೇಕು [illegible]. [illegible] ಹಿಂದು ಗಂಡಸರು ಹೆಂಡತಿಗೆ ಮಾನ [illegible] ಉಂಟು. ಈ ಹಿಂದೂಸ್ಥಾನದಲ್ಲಿ ಹೆಂಡತಿಗೆ ಗಂಡನು ಮಾನ ಕೊಡುವದಕ್ಕೆ ಕಲಿಯುವ ಸಂಸ್ಕಾರ, ಹಿಂದುಜನರ [illegible] ನಡೆಯುವದು. ಗಂಡನು ಮಾನ ಕೊಡುವದು, ಮಕ್ಕಳು ಸಹಾ ಮಾನ ಕೊಡುವದಿಲ್ಲ. ಹೆಂಗಸರಿಗೆ ಮಾನವಿಲ್ಲದಿದ್ದರೆ, ಮನೆತನದಲ್ಲಿ ಅವರಿಗೆ ಅಧಿಕಾರವು ಇಲ್ಲ. ಹಿಂದು ಮನೆಯಲ್ಲಿ ಗಂಡಸಿಗೆ [illegible] [illegible]. [illegible] ಹೆಂಡತಿಗೂ ಮಾನ [illegible]. ವಿಧವೆಗಳಿಗೆ ಮಾನವಿಲ್ಲದಿರುವ [illegible] ಕೂಡದೆಂಬ [illegible] ಕೇವಲ ಅನ್ಯಾಯ. ಆದರಿಂದ ಈ ದೇಶದ ಜನರಲ್ಲಿ ಬಹಳ ಪಾಪಗಳಿಗೆ [illegible]ತು. ಬೇರೆ ದೇಶಗಳಲ್ಲಿ, ಮುಖ್ಯವಾಗಿ ಕ್ರೈಸ್ತರಲ್ಲಿ ಗಂಡಸರೂ ಹೆಂಗಸರೂ ಅನೇಕರು ಮದುವೆ ಮಾಡಿಕೊಳ್ಳದೆ ಇರುವದು ಉಂಟು. ಆದರೆ [illegible] [illegible] ಪಾಪ[illegible]. [illegible] [illegible] ಗುಣವು ಮದುವೆ ಮಾಡಿಕೊಳ್ಳದೆ ಇರುವ[illegible] [illegible]. [illegible] ವಿಧವೆಗಳಿಗೆ, ಮುಖ್ಯವಾಗಿ ಯುವ[illegible] [illegible] ವಿಧವೆಗಳಿಗೆ [illegible] [illegible] [illegible] ಮಾಡಿದ [illegible]ಯಿಂದ [illegible]ಪ್ರಕಾರದ ಪಾಪಗಳಿಗೆ [illegible] [illegible]. ಅನೇಕ [illegible] ಗಂಡಸರು ಅಂಥಾ ವಿಧವೆ[illegible]ನ್ನು ಗಂಡನಿಲ್ಲ ದಿರುವದರಿಂದ, ಕೆಡಿಸಲಿಕ್ಕೆ ಮಾಡುವ ಪ್ರಯತ್ನವು ಸುಲಭವಾಗಿ ಕೈಗೂಡಿ [illegible] [illegible] ತಂದೆತಾಯಿಗಳಿಗೂ, ಅತ್ತೆ ಮಾವಂದಿರಿಗೂ [illegible] ಎಂಥಾ ಅವಮಾನ! ಮತ್ತು ಅ[illegible] ಅಂಥಾ ವಿಧವೆಗಳು [illegible] [illegible] [illegible] [illegible] [illegible] [illegible] [illegible] [illegible] [illegible] [illegible]

ನಾಳತಿ, ಈ ನಿಬಂಧನೆ ಹೋದ್ದರಿಂದ, ಹೀಗಿನ ಕಾನೂನು ಸರ್ವರಿಗೂ ಎಷ್ಟು ಕ್ಷೇಮಕರವಾಗಿರುತ್ತದೆಂತ ತಿಳಿದು, ಯಲ್ಲರೂ ಆ ಬಂಗಾಳದ ಗೃಹಸ್ಥರ ಹಾಗೆಯೇ ಹಿಂದುಸ್ಥಾನದ ಸರ್ವಾಧಿಪತಿಗೂ, ಈ ಕಾನೂನಿಗೋಸ್ಕರ ಪ್ರಯತ್ನ ಮಾಡಿದವರೆಲ್ಲರಿಗೂ ಶುಭವಾಗಲೆಂದು ಹೇಳಿ, ದೇವರ ಕೃಪೆಯನ್ನು ಗ್ರಹಿಸಿ, ಆತನಿಗೆ ಸ್ತೋತ್ರ ಕೊಟ್ಟು, ಆ ನಿಬಂಧನದಿಂದ ಬಿಡುಗಡೆಯಾದ ಮೇಲೆ ಬಂದ ಸ್ವತಂತ್ರವನ್ನು ಪ್ರಯೋಗಿಸಿ, ಯಲ್ಲರೂ ಅದರಿಂದ ಬರ ತಕ್ಕ ಶುಭಕರವಾದ ಫಲಗಳನ್ನು ಅನುಭವಿಸುವ ಹಾಗೆ ಪ್ರಯತ್ನ ಮಾಡ ತಕ್ಕದು. ಆದರೆ ಸಾವಿರಾರು ವರ್ಷದಿಂದ ಅಂಥಾ ಬಂಧನದಲ್ಲಿದ್ದ ಹಿಂದು ಜನರು ತಾವೇ ಬಿಡುಗಡೆ ಮಾಡಿಕೊಳ್ಳುವ ಹಾಗೆ, ಅವರಿಗೆ ಅಷ್ಟು ಧೈರ್ಯವೂ ಬುದ್ಧಿಯೂ ಬೆಳಕೂ ಯಲ್ಲಿಂದ ಬಂತೆಂಬದನ್ನು ಗ್ರಹಿಸಿದರೆ, ಯೆಷ್ಟೋ ಉತ್ತಮ!

ಕನ್ನಡ ಜಿಲ್ಲೆಯ ಬಡಗು ಪಾಲಿನ ದವಸಧಾನ್ಯದ ಪ್ರದರ್ಶನ. ಇದು ೧೮೭೬ನೇ ಇಸವಿ, ಫೆಬ್ರುವರಿ ೨೬, ೨೭, ೨೮, ೨೯, ಮತ್ತು ಮಾರ್ಚ್ ೧ನೇ ತಾರೀಕು.

REPORT OF THE AGRICULTURAL EXHIBITION OF NORTH CANARA, HELD AT SIRCY ON THE 26th, 27th, 28th AND 29th FEBRUARY, AND 1st MARCH.

೧೮೭೫ನೇ ವರುಷದ ಪಂಚಾಂಗದಲ್ಲಿ, ಮದ್ರಾಸಿನಲ್ಲಿ ೧೮೭೪ನೇ ವರ್ಷದಲ್ಲಿ ಆದ ಪ್ರದರ್ಶನದ ವರ್ಣನೆಯನ್ನು ಸಂಕ್ಷೇಪವಾಗಿ ಮಾಡಿದೆವು. ಆ ಪ್ರದರ್ಶನದ ಮುಖ್ಯ ಪ್ರಯೋಜನವೇನು ಯೆಂಬ ವಿಷಯದಲ್ಲಿ ಹೇಳಿದ್ದೇನಂದರೆ—೧. ಈ ಹಿಂದುಸ್ಥಾನದ ಜನರಲ್ಲಿ ಲಾಭಕರವಾದ ಕೈಕೆಲಸ ಮುಂತಾದವುಗಳ ಮೇಲೆ ಮನಸ್ಸು ಹುಟ್ಟಿಸುವದು;—೨. ಜನರು ಇದಕ್ಕೆ ಮನ ಹಾಕ್ಕಿಸಿ, ಆ ಕೆಲಸ ಕೈಗೂಡಿ ಬರುವ ಹಾಗೆ ಅದಕ್ಕೆ ಸಹಾಯ ಮಾಡ್ಬೇಕೋ ಯೆಂಬದನ್ನು ನಿಶ್ಚಯಿಸುವದು.—ಆ ಪ್ರದರ್ಶನವು ಸಾಕಷ್ಟು ಸಾರ್ಥಕವಾಯಿತು. ೧೮೭೫ನೆಯಲ್ಲಿ ಮದ್ರಾಸಿನ ಈಗಿನ ಅಧಿಪತಿಯಾಗಿರುವ ಲಾರ್ಡ್ ಹಾಬ್ರಿಸ್ (ಲಾರ್ಡ್ ಅಂದರೆ ಪ್ರಭು) ಮದ್ರಾಸಿನ ಆಧಿಪತ್ಯದ ಅಧಿಕಾರವನ್ನು ನಡಿಸ ತೊಡಗಿದರು. (ಅವರು ೧೮೭೩ನೇ ನವೆಂಬರ್ ತಿಂಗಳಲ್ಲಿ ಕನ್ನಡ ಜಿಲ್ಲೆಯನ್ನು ನೋಡ ಬಂದಾಗ, ಈ ಪಂಚಾಂಗ ಓದುವವರಲ್ಲಿ ಅನೇಕರು ಅವರನ್ನು ಕಂಡು ಇದ್ದಾರು.) ಅವರು ಅಂಥಾ ಪ್ರದರ್ಶನಗಳು ಉದ್ಧಾರವಾಗುವ ಹಾಗೆ ಬಹಳ ಆಸಕ್ತಿಪಟ್ಟದರಿಂದ, ಈ ದೇಶದವರ ಐಶ್ವರ್ಯವು ಹೆಚ್ಚಾಗಬೇಕೆಂಬ ವಿಷಯದಲ್ಲಿ ಅವರಿಗೆ ಬಹಳ ಮನಸ್ಸುಂಟೆಂಬದು ಕಾಣಬಂತು. ಲೋಹಗಳೂ ರತ್ನಗಳೂ ಬೆಳ್ಳಿ ಬಂಗಾರ ಇತ್ಯಾದಿಗಳೂ ಸಿಲ್ಲಾ, ದವಸಧಾನ್ಯ ಮುಂತಾದವುಗಳೇ ಈ ದೇಶದ ಐಶ್ವರ್ಯ ಹೆಚ್ಚಾಗಬೇಕಾದರೆ, ಮುಖ್ಯ ಆಧಾರವಾಗಿರಲಾಗಿ ಕೃಷಿಕಷ್ಟವೂ ವ್ಯಾಪಾರವೂ ಹೆಚ್ಚಾಗುವ ಹಾಗೆ, ಇವುಗಳ ಮೇಲೆ ಮುಖ್ಯವಾಗಿ ನಮ್ಮ ಅಧಿಪತಿಯು ಲಕ್ಷ್ಯ ಇಟ್ಟರು. ಕೃಷಿಕಷ್ಟ ವ್ಯಾಪಾರಸಹಾರ ಮಾಡುವವರಿಗೆ ಧೈರ್ಯ ಬರುವ ಹಾಗೆ, ವ್ಯಾಪಾರದಲ್ಲಿಯೂ ಕೈಕೆಲಸಗಳಲ್ಲಿಯೂ ಉತ್ತಮವಾದ ಪದಾರ್ಥಗಳನ್ನೂ, ಗದ್ದೆ ಹೊಲಗಳಲ್ಲಿ ಹುಟ್ಟುವ ವಸ್ತುಗಳಿಂದ ಉತ್ತಮವಾದ ಹೂಗ್ರಗಳನ್ನು ೧೮೭೪ನೇ ಫೆಬ್ರುವರಿಯಲ್ಲಿ ಮದ್ರಾಸಿನಲ್ಲಿ ಪ್ರದರ್ಶನಕ್ಕೆ ಇಡಬೇಕೆಂತಲೂ, ಅದೇ ಪ್ರಕಾರ ಹಾಂದಾಂ . . . ಭೂಮಿಯ ಹುಟ್ಟುವಳಿಯ ಮತ್ತು ಕೈಕೆಲಸಗಳ ಪ್ರದರ್ಶನಗಳನ್ನು ಮಾಡ ಬೇಕೆಂತಲೂ, ಯಾರ ಪದಾರ್ಥವು ಅತ್ಯುತ್ತಮವಾಗಿರುತ್ತದೋ, ಅವರಿಗೆ ಇನಾಮು ಕೊಡ ಬೇಕೆಂತಲೂ ಅಪ್ಪಣೆ ಕೊಟ್ಟರು. ಮದ್ರಾಸಿನ ಹುಟ್ಟುವಳಿಯ ಪ್ರದರ್ಶನವು ನಿಶ್ಚಯಿಸಿದ ಹಾಗೆ ೧೮೭೪ನೇ ಫೆಬ್ರುವರಿಯಲ್ಲಿ ಆಗಿ, ಅಪೇಕ್ಷೆಯ ಪ್ರಕಾರ ಬಹಳ ಸಾರ್ಥಕವಾದ್ದರಿಂದ, ೧೮೭೬ನೇ ವರ್ಷಕ್ಕೆ ಮತ್ತೊಂದು ನಿಯಮಿಸಿದವಾಗುತ್ತದೆ. ಇದಲ್ಲದೆ ಕೆಲವು ಜಿಲ್ಲೆಗಳ ಪ್ರದರ್ಶನಗಳು ಸಹಾ ಉಂಟಾದವು. ಇವುಗಳ ಪೈಕಿ ೧೮೭೬ನೇ ಫೆಬ್ರುವರಿಯ ಕಡೇ ಸಪ್ತಕದಲ್ಲಿ ಆದ ಶಿರ್ಶಿಯ

[illegible] ಪ್ರದರ್ಶನದ [illegible] ಸ್ವಲ್ಪ [illegible] ಈ [illegible] ಪ್ರಯತ್ನವಾಗುವ [illegible] ಮತ್ತೊಂದು ಪ್ರದರ್ಶನವು [illegible] ಸಿದ್ಧವಾಗುತ್ತದೆ.

[illegible] ಶಿರಸಿಯ ಪ್ರದರ್ಶನವನ್ನು [illegible] ಜನವರಿಯಲ್ಲಿ ಮಾಡಬೇಕಾಗಿ ಅಪ್ಪಣೆ [illegible]. ಆದರೆ ಅದಕ್ಕೆ [illegible] ಇತ್ಯಾದಿ [illegible] ಮಾಡುವದಕ್ಕೆ ಸಮಯ ಕಡಿಮೆಯಿತ್ತು. ಮಾತ್ರವಲ್ಲ, ಬಡಗು ಪಾಲಿನ ವಿಶೇಷವಾದ [illegible] ವಿಷಯದಲ್ಲಿ ಸ್ವಲ್ಪ ವ್ಯತ್ಯಾಸ ಆಗುವದು [illegible] ಕಂಡ ಕಾರಣ, ಫೆಬ್ರುವರಿಯ ಕಡೇ ಸಪ್ತಕವನ್ನು ಅದಕ್ಕೆ ಗೊತ್ತುಪಡಿಸಿದರು. ಈ ಕಾಲ, ಕನ್ನ ಕುಂದಾಪುರ, [illegible] ಅಂಕೋಲೆ, ಸೂಪೆ, ಸಾಗರ, [illegible] ಗ್ರಾಮಗಳಲ್ಲಿಯೂ, ಎಲ್ಲಾ ಸಂತೆಗಳಲ್ಲಿಯೂ, ಜಾತ್ರೆಗೆ ಇತ್ಯಾದಿ [illegible] ಜನರು ಕೂಡಿ ಬರುವ ಸಮಯಗಳಲ್ಲಿಯೂ ಡಂಗುರ ಸಾರಿಸಿ ಜನರಿಗೆ [illegible]. ಇದಲ್ಲದೆ ಎಲ್ಲಾ [illegible] ಬೇರೆ ಉದ್ಯೋಗಸ್ಥರೂ ಆ ಪ್ರದರ್ಶನದ ಸಮಯವನ್ನೂ ಸ್ಥಳವನ್ನೂ ಪ್ರಯೋಜನವನ್ನೂ [illegible] ಬೇಕೆಂತ ಅಪ್ಪಣೆ [illegible] ಪ್ರಕಾರ ಮಾಡಿದರು. ಈ ಪ್ರಕಾರ [illegible] ಹೊತ್ತು [illegible] ಸರಕಾರದವರ ಅಪೇಕ್ಷೆಗೆ ಅನುಕೂಲವಾಗಿ ಇರ ಬೇಕೆಂತ ಕೇಳಿ, ಆ ಪ್ರಕಾರ ನಡೆದರು.


ಅನಂತರ ಶಿರಸಿಯಲ್ಲಿ ತಕ್ಕ ಮನೆಯನ್ನು ಕಟ್ಟಿ [illegible] ಮಾಡುವದು ಅವಶ್ಯವಾಯಿತು. ಫೆಬ್ರುವರಿ [illegible] ಆರಂಭದ ಪರ್ಯಂತರ ಆ ಕೆಲಸ [illegible] ಕೂಡುವದಕ್ಕೆ ಆಗದೇ ಹೋದರೂ, ಶಿರಸಿಯ [illegible] ವಿಶೇಷವಾದ [illegible] ತಕ್ಕ ಪ್ರಯತ್ನದಿಂದ ಅವಶ್ಯವಾಗಿರುವ ಸಮಯಕ್ಕೆ ಎಲ್ಲಾ ಸಿದ್ಧವಾಯಿತು. ಕೆಳಗೆ ಕಾಣುವ ನಕ್ಷೆಯ ಪ್ರಕಾರ, ಆ ಮನೆಯು [illegible] ೧೦೦ ಅಡಿ ಉದ್ದ, ೨೪೦ ಅಡಿ ಅಗಲವಾಗಿ, ಈ ಪ್ರಕಾರ ಚೌಕ ೨೪೦೦೦ [illegible]. ಇದರಿಂದ [illegible] ಅಂತ ಪ್ರದರ್ಶನದ ಉದ್ದಿಷ್ಟವಾಗಿಯೂ, [illegible]

[illegible] ಅಡಿ ಉದ್ದ, [illegible] ಅಡಿ ಅಗಲ. [illegible] ೧೦ ಅಡಿ ಉದ್ದ, ೧೨ ಅಡಿ ಅಗಲದ [illegible] ಪ್ರದರ್ಶನ [illegible] ೧೮ ಮುಕ್ಕಾಲಿಗಳನ್ನು ಮಾಡಿದ್ದರು, ಒಂದೊಂದು ೧೬ ಅಡಿ ಉದ್ದ, ೪ ಅಡಿ ಅಗಲ. ಒಂದೊಂದಕ್ಕೆ ಎರಡು ಅಂತಸ್ತುಗಳು, ಒಂದು ನೆಲದಿಂದ ೧ ಅಡಿ ಎತ್ತರ, ಮತ್ತೊಂದು ನೆಲದಿಂದ ೪ ಅಡಿ ಎತ್ತರ. ಈ ಪ್ರಕಾರ ಒಂದು ಮುಕ್ಕಾಲಿಗೆಯಲ್ಲಿ ಪ್ರದರ್ಶನಕ್ಕೆ ಬೇಕಾಗಿ ೧೨೦ ಚೌಕ ಅಡಿ, ಎಲ್ಲಾ ೧೮ ಮುಕ್ಕಾಲಿಗಳಲ್ಲಿ ಕೂಡಿ ೨೧೬೦ ಚೌಕ ಅಡಿ ಸ್ಥಳವಿತ್ತು. [illegible] ಎರಡು ಮುಕ್ಕಾಲಿಗಳ ಸಾಲುಗಳಿಗೂ ಮಧ್ಯದಲ್ಲಿ ಎತ್ತರವಾದ [illegible] ಸ್ಥಳವಿತ್ತು. ಈ ಮನೆಯ ಸಮೀಪದಲ್ಲಿ ಮತ್ತೊಂದು ಪ್ರತ್ಯೇಕವಾದ [illegible] ಪಶುಗಳಿಗೋಸ್ಕರ ಕಟ್ಟಿದರು.*

ಪ್ರದರ್ಶನಕ್ಕೆ ತಂದ ವಸ್ತುಗಳನ್ನು ಪರೀಕ್ಷಿಸುವದಕ್ಕೂ, ಸರಕಾರದವರು ಕೊಡುವ ಇನಾಮುಗಳ [illegible] ಜನರಿಗೆ ಮುಟ್ಟಿಸುವದಕ್ಕೂ ಕೆಳಗೆ ಹೇಳಿರುವ ಪ್ರಕಾರ ಕೂಟವು ನೇಮಿಸಿ ಇತ್ತು, ಯಾತಂದರೆ: [illegible] ಕಲೆಕ್ಟರ್ ರಾಬಿನ್ಸನ್ ಸಾಹೇಬರು ಈ ಕೂಟದ ನಾಯಕ, [illegible] ಆಕ್ಟಿಂಗ್ ಸಿವಿಲ್ [illegible] [illegible] ಪಾಲ್‌ಪ್ರೀನ್ ಸಾಹೇಬರು (ಪ್ರಧಾನಾಯಕ; [illegible] (ಕ್ರೈಸ್ತ್ ಸಾಹೇಬರು); ೩೨೧ ನೇ ಮದ್ರಾಸ ನೇಟಿವ್ ಪಾಯದಳದ [illegible] ಸಾಹೇಬ, ೨೪ ನೇ ಮದ್ರಾಸ ನೇಟಿವ್ ಪಾಯದಳದ [illegible], [illegible] ಕಲೆಕ್ಟರ್ [illegible] ಪ್ರಭುಗಳು.

ಪ್ರದರ್ಶನವನ್ನು ನೋಡುವವರಿಗೆ [illegible]

* [illegible] ೨, ೩, [illegible]; ೪, [illegible]; ೫, [illegible]; ೬, [illegible]; ೭, ೮, [illegible]; ೮, [illegible]. ೯, [illegible]



ಫೆಬ್ರುವರಿ ೨೬ನೇ ತಾರೀಕು ನಿಶ್ಚಯವಾಯಿತು. ಈ ಉತ್ಸವಕ್ಕೆ ಹೊರಊರವರು ಐದು ಸಾವಿರಕ್ಕಿಂತ ಹೆಚ್ಚು ಜನರು ಕೂಡಿ ಬಂದಿದ್ದರು. ಒಂದು ದಿನದ ಮುಂಚೆಯೇ ಈ ಬಗ್ಗೆ ಸವಣೂರಿನ ನವಾಬರು ಸಹಾ ಅನೇಕ ಚಾಕರ ಸಹಿತವಾಗಿ ಬಂದಿದ್ದರು. ಹೆಬ್ಬಾಗಿಲಲ್ಲಿ ೨೪ನೇ ಪಟಾಲಮಿನ ಗಾರ್ಡ್ ಅವ್ ಜನರ್ (ಮಾನದ ಕಾವಲು) ನಿಂತಿತ್ತು. ಶುಮಾರು [illegible] ಪ್ರದರ್ಶನದ ಮನೆಯೊಳಗೆ ಸೇರಿದರು; ಅದರಿಂದ ಹೆಚ್ಚು ಜನರು ಒಳಗೆ ಯಾವಾಗ್ಯೂ ಹೋಗಲಿಕ್ಕೆ ಆದೀತು ಯಂತ, ಹೊರಗೆ ಸುತ್ತಲೂ ಕಾದುಕೊಂಡಿದ್ದರು. ಮೇಲೆ ಹೇಳಿದ ಕೂಟದವರು ಜನರ ಗುಂಪುಗಳದೆಸೆಯಿಂದ ಬಹಳ ಪ್ರಯಾಸವಾಗಿ ಮನೆಯೊಳಗೆ ಬಂದ ಮೇಲೆ, ಈ ಕೂಟದ ನಾಯಕ ಕನ್ನಡ ಜಿಲ್ಲೆಯ ಬಡಗು ಹಾಲಿನ ಹುಟ್ಟುವಳ್ಳೀ ಪ್ರದರ್ಶನವನ್ನು ಆರಂಭಿಸಿದರು. ಮತ್ತೆ ಅಲ್ಲಿಟ್ಟ ಒಡವೆಗಳನ್ನು ಪರೀಕ್ಷಿಸುವದಕ್ಕೆ, ಇನಾಮಿಗೆ ಯೋಗ್ಯರು ಯಾರೆಂಬದನ್ನು ನಿಶ್ಚಯಿಸುವದಕ್ಕೂ ಹತ್ತಿದರು. ಹುಟ್ಟುವಳ್ಳಿಯ ೨೦೮ ಥರದ ಜಾತಿಗಳ [illegible] ಒಡವೆಗಳು ಇದ್ದವು. ಇವುಗಳಿಂದ ಆ ಮೂ ಕಾಲಿಗೆಗಳು ತುಂಬಿ ಹೋದವು ಮಾತ್ರವಲ್ಲ, ಉಳಿದ ಸ್ಥಳವೂ ಜಗಲಿಗಳೂ ಸಹಾ ದೊಡ್ಡ ಕುಕ್ಕೆಗಳಿಗೆ ಬೇಕಾಯಿತು. ಈ ಪ್ರಕಾರ ಸ್ಥಳವು ಸಾಲದೆ ಹೋಗಿ, ಕೆಲವು ಒಡವೆಗಳನ್ನು ಮೊದಲಿಟ್ಟ ಸ್ಥಳದಿಂದ ಬೇರೆ ಕಡೆಗೆ ಒಯ್ಯ ಬೇಕಾದ್ದರಿಂದ, ಸ್ವಲ್ಪ ಒಡವೆಗಳಿಗೆ ನಷ್ಟ ಸಹಾ ಬಂತು. ಆ ಕೂಟದವರು ಮೊದಲು ಹಟ್ಟುರಾಸಿಯಾಗಿ ಉತ್ತಮ ಒಡವೆಗಳನ್ನು ಬೇರೆ ಮಾಡಿದರು; ಮತ್ತು ಇವುಗಳಲ್ಲಿ ಯಾವದರಿಂದ ಯಾವದು ಹೆಚ್ಚೇದು ಯೆಂಬದನ್ನು ನಿಶ್ಚಯಿಸ ಹತ್ತಿದರು. ಈ ಕೆಲಸದಲ್ಲಿ ಅವರಿಗೆ ಮುಖ್ಯವಾಗಿ ಸಹಾಯ ಮಾಡಿದ ಗೃಹಸ್ಥರು ಯಾರೆಂದರೆ,—ಹ್ಯಾದೇ ತಾಲೂಕಿನ ವಿಟ್ಠಲರಾಯ ಶಂಕರ, ಅಂಕೋಲೆಯ ಚಂದ್ರಯ್ಯಶೆಟ್ಟಿ ಹೆಬ್ಬಾರ, ಬಿಳಗಿಯ ಸಾವಕಾರ ಸಳಿಗಾಲ ರಾಮಪ್ಪ, ಹೊನ್ನಾವರದ ಸಾವಕಾರ ಅಣ್ಣಪ್ಪ, ಕುಂದಾಪುರದ ಸಾವಕಾರ ಸುಬ್ಬರಾಯ ಕಾಮತ, ಸೂಪೆಯ ಸಾವಕಾರ ಕಂತಪ್ಪಾ. ಪ್ರದರ್ಶನದ ಸಮಯವು ೩ ದಿವಸವಾಗಿರ ಬೇಕೆಂತ ಮೊದಲು ನೆನಸಿದ್ದರು; ಆದರೆ ಕೂಟದವರ ಮೇಲೆ ಬಿದ್ದ ಕೆಲಸವು ಬಹಳವಾದ್ದರಿಂದ, ೪ ದಿವಸ ಬೇಕಾಯಿತು. ಹೀಗೆ ಮಾರ್ಚ್ ೧ ನೆಯಲ್ಲಿ ಪ್ರದರ್ಶನವನ್ನು ತೀರಿಸಿದರು. ಈ ದಿವಸಗಳಲ್ಲಿ ಆ ಮನೆಯಲ್ಲಿಯೂ ಅದರ ಸುತ್ತಲೂ ಯಡೆಬಿಡದೆ ಶುಮಾರು ೨೦೦೦ ಜನರು ಯಾವಾಗಲೂ ಇದ್ದರು. ಮತ್ತು ಪ್ರದರ್ಶನವು ಸಂಶಯವಿಲ್ಲದೆ ಕೈಕೂಡಿ ಬಂತೆಂತ ಹೇಳತಕ್ಕದ್ದು. ಮತ್ತು ಜನರಲ್ಲಿ ಸಹಾ ಅದರಿಂದ ಪಂಥ ಪ್ರಯತ್ನವು ಬಹಳ ಹೆಚ್ಚಿತು. ಕೆಲವರು ತಾವು ನಿರೀಕ್ಷಿಸಿದ ಪ್ರಕಾರ ಆಗಲಿಲ್ಲ ಯೆಂ, ಕಚೇರಿ ಪಡಲಿಕ್ಕೆ ಕಾರಣವಾದಾಗ್ಯೂ, ಪ್ರದರ್ಶಕರು ಆ ಕೂಟದವರ ತೀರ್ಪಿಕೆಗೆ ಒಪ್ಪಿಕೊಳ್ಳ[illegible]ಗ, ಈ ಅಥವಾ ಆ ಒಡವೆಯಲ್ಲಿ ತಮಗೆ ಸರಿ ಯಾರು ಇದ್ದಾರೆಂತ ನೆನಸಿಕೊಂಡು ಇದ್ದ ಕೆಲವು ಊರು ಗ್ರಾಮಗಳವರು ತಮ್ಮ ಪ್ರಶಸ್ತತೆಯ[illegible] ಕೊಂಡರು, ಬೇರೆ ಊರು ಗ್ರಾಮಗಳವರ ಈ ಅ[illegible]ಗಳು ಯೆ[illegible] ಉತ್ತಮವೆಂತ ಪ್ರಸಿದ್ಧವಾಯಿತು. ಆದರೆ ಇಂಥಾ ಪ್ರದರ್ಶನಗಳಿಂದ ಹೆಚ್ಚಿನ ಒಡವೆಗಳ ಉತ್ಪತ್ತಿಯು ನಿಶ್ಚಯವಾಗುವದಾದರೆ, ಜನರಿಗೆ ಬಹಳ ಹಿತ್ತೈಯಾದೀತು. ಹ್ಯಾಗಂದರೆ, ಆಗ್ಯೆ ಹೆಚ್ಚಾಗಿ [illegible] ತನ್ನಿಂದ ಆಗುವಷ್ಟು ಪ್ರಯತ್ನ ಮಾಡಿ, ತನ್ನ ಒಡವೆಗೆ ಯಾವದೂ ಸರಿಯಾಗದ ಹಾಗೆ ಆಗ ಬೇಕೆಂತ ಪ್ರಧಾನ ಸ್ಥಾನವನ್ನು ಹೊಂದಲಿಕ್ಕೂ, ಅದನು [illegible]ಸಲಿಕ್ಕೂ ಜಾಗ್ರತೆಯಾಗಿದ್ದನು.

ಈ ಕೆಳಗೆ ಪ್ರದರ್ಶನಕ್ಕೆ ಇಟ್ಟ ಒಡವೆಗಳ ಪಟ್ಟಿಯು ಇನಾಮುಗಳ ಪಟ್ಟಿಯನ್ನೂ ಕಾಣಿಸಿದ್ದೇವೆ.

1. ವ್ಯಾಪಾರದ ಒಡವೆಗಳು.

೧. ಅಕ್ಕಿ. ೨೦ ಪಂಥಗಾರರು. ೩ ಇನಾಮು, ೧ಕ್ಕೆ ರೂ ೨[illegible], ೨ಕ್ಕೆ ದರ ೧ರ ರೂ ೧೦.

೨. ಅಡಿಕೆ. ೨೪೦ ಪಂ. ೩ ಇನಾಮು, ದರ ೧ರ ರೂ ೧೦.

೩. ಮೆಣಸು. ೧೮೩ ಪಂ. ೨ ಇನಾಮು ಕರಿಮೆಣಸಿಗೆ, ದರ ೧ ರ ರೂ ೫; ಬಿಳೇ ಮೆಣಸಿಗೆ ರೂ ೨೦.

೪. ಸಕ್ಕರ. ೬೪ ಪಂ. ೧ ಇನಾಮು, ರೂ ೩೦.

೫. ಬೆಲ್ಲ—ತಾಳೆಬೆಲ್ಲ. ೪ ಪಂ. ಇನಾಮು ಇಲ್ಲಾ.—ಕಬ್ಬಿನಬೆಲ್ಲ. ೧೩೨ ಪಂ. ೨ ಇನಾಮುಗಳು, ೧ಕ್ಕೆ ರೂ ೧೫, ೧ಕ್ಕೆ ರೂ ೧೦.

೬. ಸಕ್ಕರೆ. ೧೮೧ ಪಂ. ೧ ಇನಾಮು, ಕಾಳಿದ ಯೆಲಕ್ಕಿಗೆ, ರೂ ೨೦. ೧ ಇನಾಮು ತಾಳೆಯಾದ ಕ್ಕೆ, ರೂ ೧೫.

೭. ಕಾಫಿ. ೩೧ ಪಂ. ೧ ಇನಾಮು, ರೂ ೧೦.

೮. ತುಂಬಿ. ೧೨ ಪಂ. ೩ ಇನಾಮು, ರೂ ೧೦, ರೂ ೮, ರೂ ೫.

೯. ಜೇನುಮೇಣ. ೧೩ ಪಂ. ೧ ಇನಾಮು, ರೂ ೨೫, ಬಿಳೀಮೇಣಕ್ಕೆ. ೨ ಇನಾಮು, ರೂ ೨೯ ೧೦, ಹಳದಿಬಣ್ಣದ ಮೇಣಕ್ಕೆ.

೧೦. ಅ ಪಂ. ೧ ಇನಾಮು, ರೂ ೧೦.

೧೧. ಲವಂಗ ೯ ಪಂ. ೧ ಇನಾಮು, ರೂ ೫.

೧೨. ಚಕ್ಕೆ. ೨೫ ಪಂ. ಇನಾಮು ಇಲ್ಲಾ.

೧೩. ಕಾಚು. ೭ ಪಂ. ೨ ಇನಾಮು, ದರ ೧ ಕ್ಕೆ ರೂ ೫.

೧೪. ಪಾಗಪುರಿ.
೧.) ಕತ್ತದಪುರಿ. ೧೦ ಪಂ. ೨ ಇನಾಮು, ರೂ ೧೦, ರೂ ೫.
೨.) ಶೀಗೇಪುರಿ. ೧ ಪಂ. ೧ ಇನಾಮು, ರೂ ೯.
೩.) ಕತ್ತದಪಾಗ. ೧ ಪಂ. ಇನಾಮು ಇಲ್ಲಾ.

೧೫. ಯೆಣ್ಣೆ.
೧.) ತೆಂಗಿನ ಯೆಣ್ಣೆ. ೫೦ ಪಂ. ೪ ಇನಾಮು, ರೂ ೨೫, ರೂ ೨೦, ರೂ ೧೫, ರೂ ೫.
೨.) ಹೊನಬನೆ. ೧ ಪಂ. ೧ ಇನಾಮು, ರೂ ೫.
೩.) ಯೆಳ್ಳೆಣ್ಣೆ. ೫ ಪಂ. ೨ ಇನಾಮು, ರೂ ೧೦, ರೂ ೫.
೪.) ಹಾರಾಪನಿಯೆಣ್ಣೆ. ೨ ಪಂ. ೧ ಇನಾಮು, ರೂ ೧೦.
೫.) ಲವಂಗದ ಯೆಣ್ಣೆ. ೫ ಪಂ. ೧ ಇನಾಮು, ರೂ ೫.
೬.) ಗಾಣದ ಯೆಣ್ಣೆ. ೨ ಪಂ. ೧ ಇನಾಮು, ರೂ ೧೦.
೭.) ಹಾಪ್ಯೆಣ್ಣೆ. ೨೫ ಪಂ. ಇನಾಮು ಇಲ್ಲಾ.

೧೬. [illegible] ೪೬ ಪಂ. ೩ ಇನಾಮು, ರೂ ೧೫, ರೂ ೧೦, ರೂ ೫.

೧೭. ಮರಬಾಳೆಗಳು. ೨ ಪಂ. ೨ ಇನಾಮು, ದರ ೧೮ ರೂ ೧೦.

೧೮. ತೆಂಗಿನ ಕಾಯಿ. ೨೫ ಪಂ. ೩ ಇನಾಮು, ರೂ ೧೦, ರೂ ೮, ರೂ ೫.

೧೯. ಹಿಟ್ಟು.
೧.) ಬೈನೀಹಿಟ್ಟು. ೯ ಪಂ. ೧ ಇನಾಮು, ರೂ ೩.
೨.) ಕಾಳಿಹಿಟ್ಟು. ೪೦ ಪಂ. ೧ ಇನಾಮು, ರೂ ೩.
೩.) ಕೂಪೇಹಿಟ್ಟು. ೮ ಪಂ. ೧ ಇನಾಮು, ರೂ ೫.
೪.) ಬಿಳೀಹಿಟ್ಟು. ([illegible]?) ೨ ಪಂ. ೧ ಇನಾಮು, ರೂ ೩.

೨೦. ಘೂಪದ ಯೆಣ್ಣೆ. ೪ ಪಂ. ೧ ಇನಾಮು, ರೂ ೨.

2. ಪಾಟ್ಟುವಸ್ತ್ರ ಜಿನಸು.

೨೧. ಕಬ್ಬು.
೧.) ಮೊರಿಸ್ಸಿನ ಕಬ್ಬು. ೬ ಪಂ. ೧ ಇನಾಮು, ರೂ ೫೦.
೨.) ಊರಕಬ್ಬು. ೩೬ ಪಂ. ಇನಾಮು ಇಲ್ಲಾ.

೨೨. ನಾರು.
೧.) ಕತ್ತ. ೨೫ ಪಂ. ೨ ಇನಾಮು, ದರ ೧ಕ್ಕೆ ರೂ ೫.
೨.) ಕೌಳಿ. ೧ ಇನಾಮು, ರೂ ೫.
೩.) ಬೈನಿ. ೬ ಪಂ. ೧ ಇನಾಮು, ರೂ ೫.
೪.) ಬಾಳೇಪಟ್ಟೆ. ೨ ಇನಾಮು, ದರ ೧ಕ್ಕೆ ರೂ ೫.
೫.) ಬೆಂಡ್ಯನಾರು. ೩ ಪಂ. ೩ ಇನಾಮು.
೬.) ಕಾಪಸಣ್ಣೆನಾರು. ೧ ಪಂ. ೧ ಇನಾಮು, ರೂ ೪.
೭.) ಪರಂಗಿ [illegible] ನಾರು. ೧ ಪಂ. ೧ ಇನಾಮು, ರೂ ೪.
೮.) ಕಿರಿ. ೩ ಪಂ. ೨ ಇನಾಮು, ರೂ ೫, ರೂ ೩.

೯.) ಪುಂಡಿ. ೧ ಇನಾಮು, ರೂ ೨೯.

೧೦) ಅಂಬಾಡಿಸರ. ೨ ಇನಾಮು, ರೂ [illegible], ರೂ ೩.

೧೧.) ಸಾಣಬು. ೧ ಪಂ. ೧ ಇನಾಮು, ರೂ ೨೯.

೧೨.) ಬೇರೆ ಬೇರೆ ನಾರು. ಕೆಲವು ಇನಾಮು.

೨೩. ಹತ್ತಿ. ಯಾರೂ ತರಲಿಲ್ಲಾ.

3. ಕಾಯಿಪಲ್ಯ.

೨೪. ಹಾಲಸು. ಕೆಲವರು ಪಂ. ೧ ಹಣ್ಣು ೧॥ ಮಣ ತೂಕ.

೨೫. ಕಾರಂಜ. ೫೦ ಪಂಥಗಾರರು.

೨೬. ಬದ್ದಿಂಗಾಯಿ. ಬಹಾಳ ಪಂಥಗಾರರು.

೨೭. ಬಟಾಟೆ. ಬಹಾಳ ಇನಾಮು.

೨೮. ಕೆಸು ಇತ್ಯಾದಿ ಗಡ್ಡೆಗಳು. ಬಹಾಳ ದೊಡ್ಡದರಲ್ಲಿ ಹಾಂದು ೨ ಮಣ, ಮತ್ತೊಂದು ಹಾಂದು ಮುಕಾಲು ಮಣ ಇತ್ತು; ಇವುಗಳಿಗೆ ಇನಾಮು ಬಂತು.

೨೯. ನಿಂಬೆ ಚಿತ್ತಳೆ ಕಂಚಿಕಾಯಿ ಇತ್ಯಾದಿ. ಕೆಲವು ಇನಾಮುಗಳು.

4. ಬೇಸಾಯದ ನೇಗಲು ಮುಂತಾದ್ದು.
ದನ ಮುಂತಾದ್ದು.
ಮದ್ದು ಮುಂತಾದ್ದು.

೩೦. ದನ ಮುಂತಾದ್ದು.

೧.) ಯೆಮ್ಮೆಕ್ಯಾಣಗಳು. ಕೆಲವು ಬಹ[illegible] ಪಸಂದು ಇರಲಿಲ್ಲಾ. ಇನಾಮು ಇಲ್ಲಾ.

೨.) ಯೆತ್ತುಗಳು. ೨ ಇನಾಮು, ದರ ೧ಕ್ಕೆ ರೂ ೨೯.

೩.) ದನಗಳು ಕರುಗಳು. ೨ ಇನಾಮು, ದರ ೧ಕ್ಕೆ ರೂ ೨೯.

೪.) ಆಡು ಕುರಿಗಳು ಬರಲಿಲ್ಲಾ.

೫.) ಕ್ಯಾಳಿ ಮುಂತಾದ್ದು ಕೆಲವು ಮಾತ್ರ. ಪಸಂದು ಇರಲಿಲ್ಲಾ.

೩೧. ಬೇಸಾಯದ ಸಾಹಿತ್ಯ. ಕಾಡಗತ್ತಿ, ಕುಡುಗ್ಯಾಲು, ಕಾಡಲಿ, ಇತ್ಯಾದಿ. ೬ ಪಂ. ಪಸಂದು ಇರಲಿಲ್ಲಾ. ಇಬ್ಬರಿಗೆ ಇನಾಮು, ದರ ೧ಕ್ಕೆ ರೂ ೨.

೩೨. ಕಾಗಲುಗಳು ಬಹಾಳ ಇರಲಿಲ್ಲಾ. ಕುರಿದು ಮತ್ತು ಯೆತ್ತಿನದು ಹಾಳ್ಯೆದಾಗಿತ್ತು. ೪ ಇನಾಮುಗಳು, ದರ ೧ಕ್ಕೆ ರೂ ೨೯. ಬೇರೆ ೨ ಇನಾಮು, ದರ ೧ಕ್ಕೆ ರೂ ೨.

೩೩. ಕಾಣಿತುಗಳು. ೧೧ ಪಂ. ಸಾಪು ಮಾಡಿ ತಿದ್ದಿದ್ದು ಇರಲಿಲ್ಲಾ ಇನಾಮು ಇಲ್ಲಾ.

೩೪. ಔಷಧಗಳು.

೧) ಹೊತ್ತುಂಬೆ, (ತಗತುಂಬೆ.) ೧ ಇನಾಮು, ರೂ ೨.

೨.) ಹಾಲುಬಳ್ಳಿ. ೨೦ ಪ [illegible] ಇನಾಮು, ರೂ ೨೯, ರೂ ೩.

೩.) ಹಾಲುಬಳ್ಳೀ. ಹೊರೆ ಮತ್ತು ಸತ್ತು.

೪.) ಯಷ್ಟಿಕನಾಯಿಕನ ಬೇರು.

೩೫. ನಾನಾ ಹಾಡವೆಗಳು.

೧.) ಜಾಪತ್ರೆ. ೧೨ ಪಂ. ೧ ಇನಾಮು, ರೂ ೩.

೨.) ಜಾಪತ್ರೆ. ಯೆಣ್ಣೆ, [illegible] ಮು, ರೂ ೩.

೩.) ಅರಶಿಣ. ಪಂ. ಬಹಾಳ. ೧ ಇನಾಮು, ರೂ ೩.

೪.) ಬೆಂಡು. ೧ ಇನಾಮು, ರೂ ೨.

೫.) ಶಿಕೆ. ೧ ಪಂ. ಇನಾಮು, ರೂ ೨೯.

೬.) ಗಜಮರ. ೩ ಪಂ. ೧ ಇನಾಮು, ರೂ ೨.

೭.) ಬೆತ್ತ. ೧ ಇನಾಮು, ರೂ ೨.

೮.) ಉರಕ್ಯಾಲು. ೧ ಇನಾಮು, ರೂ ೨.

೯.) ಲೋಹದ ಮಣ್ಣು. ಮದ್ರಾಸಿಗೆ ಕಳುಹಿಸುತ್ತಾರೆ.

೧೦.) ಯೆರಡು ಹಣ್ಣಿನ ಲೇಯ ಹಾಳಿಗೆಗಳು. ಮದ್ರಾಸಿಗೆ ಕಳುಹಿಸುತ್ತಾರೆ.

೧೧.) ಹಾಗೆಸಪ್ಪು. ಯಾರೂ ತರಲಿಲ್ಲಾ.

ಈ ಪ್ರದರ್ಶನಕ್ಕೆ ವೆಚ್ಚ

	ರೂಪಾಯಿ.	ಆ.	ಪೈ.
೧. ಮನೆ ಕಟ್ಟುವದಕ್ಕೆ. - - -	೧೭೩	೦	೭
೨. ೧೬ ಮಂತ್ರಿಗಳು ಹೊದೆ ಕಾಗದ ಮುಂತಾದವು. - - - - - - -	೧೬	೧೫	೧
೩. ಬಡ ಪಂಥಗಾರರಿಗೆ ಕೊಟ್ಟ ಪುಸ್ತಕ ಕ್ರಯ. - - - - -	೪೭	೮	೦
೪. ಪ್ರದರ್ಶನಕ್ಕೆ ಬಂದ ಪತ್ರಗಳಿಗೆ ಮಾಡಿದ ಖರ್ಚು. - - -	೨	೧೧	೦
೫. ಮನೆಯ ಶೃಂಗಾರಕ್ಕೆ. - - -	೩೦	೭	
೬. ಸಿದ್ಧವಾದ ಪಾದವೆಗಳ ಕ್ರಯ.	೧೦	೦	
೭. ವ್ಯಾಪಾರದ ಪಾದವೆಗಳ ಇನಾಮು - - - - -	೨೪೦	೦	೦
೮. ಪ[illegible] ಜೋಡುಗಳ ಇನಾಮು. - - - - - - -	೧೨೨೪	೦	೦
೯. ಕಾಯಿಪಲ್ಯಗಳ ಇನಾಮು. -	೮೦	೦	೦
೧೦. ಬೈಬಲಿನ ಸಾಹಿತ್ಯಗಳ ಇನಾಮು. - - - - - - -	೧೪೪	೦	೦
	೧೧೧೪	೪	೭

ಈ ಖರ್ಚಿನಿಂದ ನಮ್ಮ ಮನೆಯ ಸಾಮಾನು ಮಾ[illegible] ೨೭ [illegible] ೨೬೮—೧೦—೬, ಬಿಕರಿ [illegible] ೧೦೬೭—೮—೮ ಸರಕಾರದಿಂದ ಕೊಟ್ಟಿತು.

ಕಡೆಯಲ್ಲಿ ಕಾಣಿಸಲಿಕ್ಕಿಟ್ಟ ವಸ್ತುಗಳ ವಿಷಯ ಒಂದೆರಡು ಮಾತು ಹೇಳುವದು ಉಂಟು. ಅದ[illegible] ವಾಚುವವರು ಅಂಥಾದ್ದೇನಾದರೂ ಹುಗಿ ಆಗ[illegible] ವಾ[illegible] ಲಾಭ ಪಡಕೊಂಡಾರು.

೧. ಅಕ್ಕಿ. ಕಾಣಿಸಲಿಕ್ಕಿಟ್ಟ ಅಕ್ಕಿಯ ಮಾದರಿಗಳು ಹೇರಳವಾಗಿದ್ದವು. ಆದಾಗ್ಯೂ ಜನರು ಇನ್ನಷ್ಟು ಮಾದರಿಗಳನ್ನು ಯಾಕೆ ತಾರದೆ ಹೋದರೆಂಬದು ತಿಳಿಯಲಿಲ್ಲ. ಇದಲ್ಲದೆ ಕೆಲವರು ಆಯಾ ಮಾದರಿಯ ಅಕ್ಕಿ ಬಹಳ ಸ್ವಲ್ಪ ಮಾತ್ರವೇ ತಂದ ಕಾರಣ ಪ್ರಸ್ತುತಲಿಕ್ಕೆ ಅದು ಸಾಕಾಗಲಿಲ್ಲ. ಬಹಳ ಬಿಳಿದಾದ ಬೀಗೆ ನಾಲೆಯ ಕಾ[illegible] ಅಕ್ಕಿಯು ಮಾತ್ರ ಅಕ್ಕಿ ಸರ್ವ ತಂದಿದ್ದರು. ಇದು ವ್ಯಾಪಾರಕ್ಕೆ ಸಾಲ್ದಾಗ ಬೇಕಾಗುವದರಿಂದ ವಿಶೇಷವಾಗಿತ್ತು. ಆದಾಗ್ಯೂ ಕಾಣಿಸಲಿಕ್ಕೆ ತಂದ್ದವರೆಲ್ಲರು ವಾಕ್ಯ[illegible] ಬಾಗ್ರತೆಯಿಂದ ಶುಧ್ಧ ಮಾಡದೆ ಇದ್ದದ್ದು ಸುಲಭವಾಗಿ ಗೊತ್ತಾಯಿತು.

೨. ಅಡಕೆ. ಇದಕ್ಕೆ ಪಂಥಗಾರರು ಬಹಳ ಇದ್ದರು. ಮತ್ತು ಹೆಚ್ಚಾದ ಮಾದರಿಗಳು ಬಹಳ ವಾಕ್ಯದ ಗುಣದಿಂದ ಇನಾಮು ಸಿಕ್ಕುವದು ಸುಲಭವಾಗಲಿಲ್ಲ. ಹಿಂದುಸ್ಥಾನದಲ್ಲಿಯೂ ಹಿಂದುಸ್ಥಾನದ ಸಮೀಪದಲ್ಲಿಯೂ [illegible]ಗಳಲ್ಲಿಯೂ ಮಾತ್ರವೇ ಜನರು ವೀಳೆಯ ಸಂಗಡ ಅಡಕೆ ಹಾಕಿ ತಿನ್ನುತ್ತಾರೆ. ವ್ಯಾಪಾರಕ್ಕೆ ಬರುವ ಅಡಕೆ ಎರಡು ಜಾತಿ. ಹಾಂದು ಬಿಳೇದು, ಇನ್ನೊಂದು ಕೆಂಪು. ಅಡಕೆ ಹಣ್ಣಾಯಿತೆ ಹಾಗಾಗಿಸಿದರೆ, ಬಿಳೇದಾಗುತ್ತದೆ. ಅದನ್ನು ನೀರಿನಲ್ಲಿ ಬೇಯಿಸಿ, ಒಣಗಿಸಿದರೆ ಕೆಂಪು ಆಗುತ್ತದೆ.

೩. ಮೆಣಸು. ಇದು ಸಾಧಾರಣ ವ್ಯಾಪಾರದಲ್ಲಿಯೂ ಮುಖ್ಯವಾಗಿ ವಿಲಾಯಿತಿಗೆ ರಫ್ತು ಆಗುವದರಿಂದಲೂ ಅಡಕೆಗಿಂತ ವಿಶೇಷವಾದದ್ದು. ಆದಾಗ್ಯೂ ಕಪ್ಪು ಮೆಣಸಿನ ಮಾದರಿಯನ್ನು ತಯಾರು ಮಾಡುವದರಲ್ಲಿ ಜನರು ಹೆಚ್ಚು ಜಾಗ್ರತೆ ಇಡದೆ ಇದ್ದದನ್ನು ನೋಡಿ, ಮನಸ್ಸಿಗೆ ಕರಕರೆಯಾಯಿತು. ಹ್ಯಾಗಂದರೆ, ಜಾಗ್ರತೆ[illegible] ಆಗ ಶುಧ್ಧವಾಗಿಯೂ ತಯಾರು ಮಾಡುವ ಮೆಣಸಿಗೆ ವಿಲಾಯಿತಿಯವರು ಹೆಚ್ಚು ಕ್ರಯ ಕೊಡುತ್ತಾರೆ. ಹಾಗಾದರೆ ಹೆಚ್ಚು ಮುಖ್ಯವಾದವುಗಳನ್ನು[illegible] ನಾವು ಮಾಡಿದ ಮೆಣಸಿಗೆ ಅಷ್ಟಕ್ಕೆ ಕ್ರಯ[illegible]. ಆದರೆ ಅಲ್ಲಿ ಕಾಣಿಸಲಿಕ್ಕೆ ತಂದ ಬಿಳೇ ಮೆಣಸಿನ ಮಾದರಿಗಳನ್ನು ನೋಡಿ, ಬಹಳ ಸಂತೋಷವಾಯಿತು.

೪. ನಾರೆ. ಕಾಣಿಸಲಿಕ್ಕೆ ತಂದವುಗಳಲ್ಲಿ [illegible] ಮಾತ್ರವೇ ಮೋಳೆಕಾಯಿ ಕಟ್ಟಿನ ನಾರೆಯನ್ನು [illegible]. ಅದನ್ನು [illegible] ತಂದವನಿಂದ ಕರಕರೆಯಾಯಿತು. [illegible] ಮಾಡಿ ನವೀನ ತುದವಾಗಲಿಲ್ಲ. ಅದು[illegible] ಬೇರೆ ಜಾತಿ ನಾರೆ ಬೆರಸೆಯಾಗಿತ್ತು. ಅದ್ದರಿಂದ ಇನಾಮು ಸಿಕ್ಕಲಿಲ್ಲ. ಈ ಮೋಳೆಕಾಯಿ ಕಟ್ಟಿನ ನಾರೆಯು ಈ ದೇಶದ ಕಟ್ಟಿನ ನಾರೆಗಿಂತ ಉತ್ತಮವಾಗಿರುವದರಿಂದ [illegible] ಈ ಪ್ರದರ್ಶನವಾಗುವದಾದರೆ, ಮೋಳೆಕಾಯಿ ಕಟ್ಟಿನ ನಾರೆ ಮಾದರಿಕ್ಕೆ ಪ್ರಯತ್ನ ಮಾಡಿದರೆ ವಾಸಿಯು. [illegible] ಗ್ಯೂ ಈ ದೇಶದ ಕಟ್ಟಿನ ನಾರೆ ಮಾಡಿದವರು [illegible] ರು ಅದಕ್ಕೋಸ್ಕರ ಬಹಳ ಜಾಗ್ರತೆಯಿಂದ ಶುಧ್ಧ ಮಾ[illegible]

ಬದು ಸಹಾ ಪ್ರತ್ಯಕ್ಷವಾಯಿತು.

೫. ಬೆಲ್ಲ. ರೈತರು ಇದರ ಮಾದರಿಗಳನ್ನು ತೋರಿಸಿದರು. ಈ ದೇಶದ ಕಬ್ಬಿನಿಂದ ಮಾಡಿದ ಬೆಲ್ಲ ಬಹಳ ಒಳ್ಳೇದಾಗಿತ್ತು; ಆದಾಗ್ಯೂ ಇದಕ್ಕೆ ಸಹಾ ಮಾರಿಷಿಯದ ಕಬ್ಬು ಪ್ರಯೋಗಿಸಿದರೆ, ವ್ಯಾಪಾರಕ್ಕೆ ಬಹಳ ಒಳ್ಳೇದಾದೀತು.

೬. ಯೇಲಕ್ಕಿ. ವ್ಯಾಪಾರಕ್ಕೆ [illegible]ಲಕ್ಕಿ ಸಾಫು ಮಾಡುವದು ಅವಶ್ಯ. ಆದರೆ ಯೇಲಕ್ಕಿಯ ಜಾತಿ ಪರೀಕ್ಷಿಸುವದಕ್ಕೆ ಸಾಫು ಮಾಡದ್ದು ಬೇಕು. ಆದ್ದರಿಂದ ತೋರಿಸಲಿಕ್ಕೆ ತಂದಿಡುವವರು ಯೆರಡು ತರದ್ದು ತಂದರೆ ಒಳ್ಳೇದು. ಯೇಲಕ್ಕಿ ಶುದ್ಧ ಮಾಡುವದಕ್ಕೆ ಬೇರೆ ಬಾವಿಗಳಿಗಿಂತ ಹಾವೇರಿ ಯೆಂಬಲ್ಲಿರುವ ಕೆಲವು ಬಾವಿಗಳ ನೀರು ತಕ್ಕದಾಗಿರುತ್ತದೆ. ಆದ್ದರಿಂದ ಈ ಹೊಟ್ಟುಕಡಿಮೆ ಹ್ಯಾಗೆ ಬರುತ್ತದೆ, ಆ ಹಾವೇರಿ ಬಾವಿಗಳ ಗುಣವೇನು ಯೆಂಬದನ್ನು ತಿಳಕೊಳ್ಳಲಿಕ್ಕೆ ಪ್ರಯತ್ನ ಮಾಡಿದರೆ ಒಳ್ಳೇದು.

೭. ಕಾಫಿ. ಕಾಫಿಗಿಡಗಳಿಗೆ ಸಮುದ್ರದ ತೀರದೇಶವು ತಕ್ಕದಲ್ಲ. ಆದ್ದರಿಂದ ತೀರದಲ್ಲಿರುವ ತಾಲೂಕುಗಳ ಕಾಫಿಯು ಘಟ್ಟಗಳ ತಾಲೂಕುಗಳ ಕಾಫಿಯಷ್ಟು ಪಸಂದಾಗಿರದೆ ಇದ್ದದ್ದು ಆಶ್ಚರ್ಯವಲ್ಲ. ಹೀಗೆ ಯೆತ್ತರವಾದ ಸೀಮೆಯಲ್ಲಿ ಕಾಫಿ ನಡುವದಕ್ಕೆ ಬಹಳ ಯೋಗ್ಯವಾದ ಸ್ಥಳಗಳುಂಟೆಂತ ಪ್ರದರ್ಶನದಿಂದ ನಿಶ್ಚಯವಾಯಿತು. ಅಲ್ಲಿ ಅದಕ್ಕೆ ಬೇಕಾದ ಕ್ರಮದಿಂದಲೂ ಜಾಗ್ರತೆಯಿಂದಲೂ ಕಾಫಿ ಬೆಳಸುವದಾದರೆ, ವ್ಯಾಪಾರದಲ್ಲಿ ಬಹಳ ಕ್ರಯ ಬರುವ ಸರಕು ಉಂಟಾದೀತು. ಇವಕ್ಕೆ ಸಮುದ್ರ ತೀರದಿಂದ ಮೂರು ಮೂರುವರೆ ಸಾವಿರ ಫುಟ್ ಯೆತ್ತರವಾದ, ಕಾಡುಗಳಿರುವ ಗುಡ್ಡಗಳು ಯೋಗ್ಯವಾಗಿರುತ್ತವೆ, ಮಣ್ಣು ಬೆಳೆಗೆ ಒಳ್ಳೇದಾಗಿ ಬೇಕು; ಬಲವಾದ ಗಾಳಿ ಅದಕ್ಕೆ ತಾಗ ಬಾರದು. ಅಂಥಾ ಕಾಫೀ ತೋಟಗಳನ್ನು ಮಾಡುವದಾದರೆ, ಇಷ್ಟು ವರೆಗೆ ದಿನ ದಿನ ಯೇನಾದರೂ ಸಂಪಾದಿಸಲಿಕ್ಕೆ ಕೂಡದೆ ಹೋದ ಅನೇಕ ಬಡ ಜನರಿಗೆ ಸಹಾಯವಾದೀತು. ಇಷ್ಟು ವರೆಗೆ ಕನ್ನಡ ಜಿಲ್ಲೆಯ ಬಡಗ ಭಾಗದಲ್ಲಿ ಪರ ಬಂದ್ರಕ್ಕೆ ಕಳುಹಿಸುವದಕ್ಕೆ ಸಾಕಷ್ಟು ಕಾಫಿಯಾರೂ ಮಾಡಲಿಲ್ಲ. ಆದರೆ ಪ್ರಯತ್ನ ಮಾಡಿದರೆ, ನಮ್ಮ ದೇಶದ ಈ ಭಾಗದಲ್ಲಿ ಸಹಾ ಒಳ್ಳೇ ಕ್ರಯವುಳ್ಳ ವ್ಯಾಪಾರಕ್ಕೆ ತಕ್ಕ ಕಾಫಿ ಹುಟ್ಟೀತೆಂಬದಕ್ಕೆ ಸಂಶಯವೇನೂ ಇಲ್ಲ.

೮. ಶುಂಠಿ. ಇದು ಬಹಳ ಬಂದಿತ್ತು; ಮತ್ತು ಕೆಲವು ಬಹಳ ಒಳ್ಳೇ ಮಾದರಿ ಇತ್ತು. ಆದಾಗ್ಯೂ ಪಂಚಾಯತರು ಅಮೇರಿಕದಲ್ಲಿರುವ ವೆಸ್ಟಿಂಡಿಯದಿಂದ ಬರುವ ಶುಂಠಿ ಈ ದೇಶ್ಯದಲ್ಲಿ ನೆಡುವದಾದರೆ ಬಹಳ ಗುಣವಂತ ವೆನ್ನುತ್ತಾರೆ. ಈ ದೇಶದ ಶುಂಠಿಗಿಂತ ಆ ಅಮೇರಿಕದ ಶುಂಠಿಯು ವ್ಯಾಪಾರಕ್ಕೆ ವಿಶೇಷವಾದ್ದು. ಇದರ [illegible] ಅಷ್ಟೇ ಕಷ್ಟಕ್ಕೆ ಆ ಶುಂಠಿಯ ಬೆಳೆ ಹೆಚ್ಚಾಗುತ್ತದೆ, ಮತ್ತು ಮೇಸಕಾಲದಲ್ಲಿ ಅದರಿಂದ ಯೆರಡು ಸರಕು ಉಂಟಾಗುತ್ತವೆ ಯಾವವೆಂದರೆ, ಪ[illegible] ಮಾಡಲಿಕ್ಕಾಗುವ ಗಟ್ಟಿಯಾದ ಗಡ್ಡೆಗಳು, ಮತ್ತು [illegible] ಮಾಡುವದಕ್ಕೆ ಇತ್ಯಾದಿ ಆಗುವ ಮೆದುವ[illegible] ಕೊಂಬುಗಳು. ಆ ವೆಸ್ಟಿಂಡಿಯದ ಶುಂಠಿಯು ಬಹಳ ಪಸಂದಾಗಿಯೂ ಪ್ರಯೋಜನಕರವಾಗಿಯೂ ಇರುವದರಿಂದಲೂ, ಅದನ್ನು ಮಲಬಾರಿನಲ್ಲಿ ನೆಟ್ಟು ನೋಡಿದ್ದಲ್ಲಿ ತಕ್ಕದಾಗಿ ಕಂಡು ಬಂದವರಿಂದಲೂ, ಜನರು ಅದಕ್ಕೆ ಲಕ್ಷ್ಯ ಇಡುವದು ಯೋಗ್ಯವಾಗಿರುತ್ತದೆ.

೯. ಜೇನುಮೇಣ. ಇದು ಸ್ವ[illegible] ಇದ್ದೂ ಅರಸಿನ ಬಣ್ಣದ್ದೂ ತಂದಿತ್ತು. ಮ[illegible]ವಾಗಿಯೂ ಸಂಗಾರವೆಯುಳ್ಳದಾಗಿಯೂ [illegible] ಇಲ್ಲದೆಯ[illegible] ಇತ್ತು. ಮುಖ್ಯವಾಗಿ ಬಿಳಿದಾಗಿ ಶುದ್ಧ ಮಾಡಿ[illegible] ಮೇಣ ತಕ್ಕದಾಗಿತ್ತು. ಅದು ಪಸಂದೆಂತ ಮಾತ್ರವಲ್ಲ; ಮೇಣ ಬಿಳಿದು ಮಾಡುವದು ಗೋವೆಯಲ್ಲಿಯೂ [illegible]ಲ್ಲಿಯೂ ಮೊದಲೇ ಆರಂಭವಾಗಿದ್ದರೂ ಕನ್ನಡ ಜಿಲ್ಲೆಯಲ್ಲಿ ಇತ್ತಲಾಗ ಮಾತ್ರವೇ ಶುದ್ಧ ಮಾಡಲಿಕ್ಕೆ ತೊಡಗಿದಾರೆ. ತೋರಿಸಲಿಕ್ಕೆ ಕೆಲವು ಮೇಣದ ಬತ್ತಿಗಳನ್ನು ಸಹಾ ಇಟ್ಟಿದ್ದರು; ಆದರೆ ಅವು ಅಷ್ಟು ಪಸಂದಾಗಿರಲಿಲ್ಲ. ಕನ್ನಡ ಜಿಲ್ಲೆಯಲ್ಲಿ ಆಗುವ ಅರಸಿನ ಬಣ್ಣದ ಮೇಣವನ್ನೂ, ಬೇರೆ ಕಡೆಯಿಂದ ಬರುವ ಅದೇ ತರದ ಮೇಣವನ್ನೂ ಪರೀಕ್ಷಿಸಿ ನೋಡಿದಲ್ಲಿ, ಕನ್ನಡ ಜಿಲ್ಲೆಯದು ಉತ್ತಮ ಕಂಡಿತು.

೧೦. ಅರಿದಳ. ಇದನ್ನು ಸಾಕಷ್ಟು ತಂದು ತೋರಿಸಲಿಲ್ಲ. ತಂದಿಟ್ಟ ಮಾದರಿಗಳು ಕಾಡು ಅರಿದಳ ಮರಕ್ಕೆ

ಪ್ರುಷ್ಟ ಮಾಡಿ ಬಂದ ರಸದಿಂದ ಉಂಟಾದ್ದು. ಈ ಅರಸವು [illegible] ಮರದ [illegible] ಬಿದಿಸಿ ಅಂಟೆಯು ಇಲ್ಲ. ಸಿಂಗಳದ್ವೀಪದಲ್ಲಿ ಜನರು ಮರದ ಕೆತ್ತೆ ತೆಗೆದು, ಅವುಗಳನ್ನು ಬಿಚ್ಚಿ ಅರಿದಳ ಮಾಡುತ್ತಾರೆ. ಸಿಯಾಮದೇಶದಲ್ಲಿ ಸಂಗ ಕಾಯಿಗಳನ್ನು ಮುರಿದು, ಅಲ್ಲಿ ಇಳಿದು ಬರುವ ರಸ ಗಡಿಗೆಗಳಲ್ಲಿ ಹಿಡಿಯುತ್ತಾರೆ. ಅರಿದಳವು ಜಲಾಬಿಗೆ ಒಳ್ಳೇ ಮದ್ದು ಆಗಿರುತ್ತದೆಂತಾ ಪರೀಕ್ಷೆಯಿಂದ ತಿಳಿದು ಬಂದಿದೆ. ಪ್ರಯೋಗ ಈ ಹಿಟ್ಟು ಸುಮಾರು ೧॥ ಹಾಣಾತೂಕ ಕಾಡತಕ್ಕದು.

೧೧. ಲವಂಗ. ವಿಲಾಯತಿಯಲ್ಲಿ ಇದಕ್ಕೆ ಕಾಡ [illegible] ಲಬ್ಯೆನಿ ಹೇಳುತ್ತಾರೆ. ಇದು ಸಹಾ ಅದರ ಹಾ[illegible] ಇದ್ದು. ಅದೇ ಪ್ರಯೋಜನಕ್ಕೆ ಬೀಳುತ್ತದೆ. [illegible] ಲವಂಗ [illegible] ಳವು ದಾಲಚಿನಿಗಿಂತ ಸ್ವಲ್ಪ ಕಡಿಮೆ; ಆದರೆ [illegible] ತೀವ್ರವಾಗಿರುತ್ತದೆ. ಅದನ್ನು ಹೆಚ್ಚಾಗಿ ಸಿಲೋನ ದೇಶದಿಂದ ತರುತ್ತಾರೆ. ಚೀನಿ ಲವಂಗವು ಇಲ್ಲಿಯ ಲವಂಗಕ್ಕಿಂತ ಶ್ರೇಷ್ಠ. ಶುದ್ಧವಾಗಿಯೂ ಬೆರಕೆ ಇಲ್ಲದೆಯೂ ಇರುವ ಅದರ ಎಣ್ಣೆಗೆ ಶ್ರೇಷ್ಠ ಕ್ರಯ ಇರುತ್ತದೆ.

೧೨. ತಕೆ. ತಂದು ಕಾಯಿಸಿದ ಕೆಲವು ಕಾಯಿಗಳು [illegible] ಉದ್ದವಾಗ, ಬಹಳ ಪಸಂದಾಗದ್ದು. [illegible] ದಲು ಅದರ ಹೂಳಗಿರುವ ಮೆದು ವಾದ [illegible] ಜಲಾಬಿಗೆ ಪ್ರಯೋಗಿಸಿದರು. ಈಗ ವ್ಯಾಪಾರದಲ್ಲಿ ಅದು ವಿಶೇಷವಾಗಿಲ್ಲದಿರುವದರಿಂದ ಅದರ ಪ್ರಯೋಜನ ಬಹಳ ಇಲ್ಲ.

೧೩. ಕಾಚು. ಇವುಗಳನ್ನು ಚನ್ನಾಗಿ [illegible] ಇದ್ದದರಿಂದಲೂ, ಹೊಟ್ಟು ಅದರ ಮೇಲೆ ಇರುವದರಿಂದಲೂ, ಪಸಂದಾಗಿ ಕಾಣಲಿಲ್ಲ. ಈ ದೇಶದಲ್ಲಿ ಎಲೆ ಅಡಿಕೆ ಹಾಕುವವರು ಅದರ ಸಂಗಡ ತಿನ್ನುವದಲ್ಲದೆ; ಔಷಧಕ್ಕೆ ಸಹಾ ಆಗುತ್ತದೆ. ಆದರೆ ಈ ಪ್ರಯೋಜನಕ್ಕೆ ಬೇಕಾಗ, ಅದರಲ್ಲಿ ಅನ್ಯ ಪದಾರ್ಥಗಳು ಇರಬಾರದು, ಚನ್ನಾಗಿ ಒಣಗಿ ಇರಬೇಕು. ಅದನ್ನು ಚನ್ನಾಗಿ ಮುಚ್ಚಿರುವ ಗಡಿಗೆಗಳಲ್ಲಿ ಇಟ್ಟರೆ, ಸುಲಭವಾಗಿ ಶ್ರೇಷ್ಠವಾಗಿ ಉಳಿಯುತ್ತದೆ.

೧೪. ಹಗ್ಗಮರಿ. ಇಂಥಾ ಒಳ್ಳೇ ಮಾದರಿಗಳು ಬಂದಿದ್ದವು. ಮನೆಗಳಲ್ಲಿ ನೆಲವನ್ನು [illegible] ಸುವದಕ್ಕೆ ತಕ್ಕ ಹಗ್ಗಮರಿಯಿಂದ ಮಾಡಿದ ಹಾಸುಗಳು ಪಸಂದಾಗಿದ್ದವು.

೧೫. ಎಣ್ಣೆ. ಬಹಳ ನಮೂನೆಗಳಾಗಿರುವ ಸುಗಂಧ ಎಣ್ಣೆ ಬಂದಿದ್ದವು. ಇದು ಕೊಬ್ಬರಿಯಿಂದ ಬರುವ ತೆಂಗಿನ ಎಣ್ಣೆಯ ಹಾಗೆಯೇ. ಬಹಳ ಶುದ್ಧವಾಗಿಯೂ ಶ್ರೇಷ್ಠವಾಗಿಯೂ ಇತ್ತು. ಮುಂದಿನ ಬಾರಿ ಇನ್ನೂ ಕೆಲ ದರು ಸಹ, [illegible] ದ ಕಾಲ ಸಾಕಷ್ಟು ವಿನಾ ಲಿಕ್ಕೆ ಇರುತ್ತಿಲ್ಲ. ಹಾಗಿದ್ದೇ ಮಾರಿದರೆ ತೀರುವದು; ಇದು ಸಹಾ ಸ್ವಲ್ಪ ಮಾತ್ರವೇ ಇತ್ತು. ಬೇರೆ ಕೆಲವು ಹೊಸ ಎಣ್ಣೆಗಳು ಸಹಾ ಬಂದಿದ್ದವು; ಆದರೆ ಸಾಕಷ್ಟು ಇರಲಿಲ್ಲ. ಲವಂಗದ ಎಣ್ಣೆಯು ಹಾಮಾಳವು ಹಾರಿ ಹೋಗಿದ್ದದರಿಂದ, ಅಷ್ಟು ಉಪಯೋಗವಾಗಿರಲಿಲ್ಲ. ಆದರೆ ಗಂಧದ ಎಣ್ಣೆ ಬಹಳ ಶ್ರೇಷ್ಠ ಪರಿಮಳವುಳ್ಳದಾಗಿ ಪರೀಕ್ಷೆಯಲ್ಲಿ ಪಸಂದು ತೋರಿತು; ಹೇಗೆಂದರೆ ಅದನ್ನು ಕಾಗದದ ಮೇಲೆ ಹಾಕಿದಾಗ, ಆ ನಕ್ಕೆ ಒಳಗಾಗದ ಕಣಗಳೇ ಹಾರಿ ಹೋಯಿತು. ಹೀಗಾದರೆ ಆ ಎಣ್ಣೆ ಶ್ರೇಷ್ಠದಂತಾ ತಿಳಕೊಳ್ಳ ಬಹುದು. ಇದಲ್ಲದೆ ಅದು ವ್ಯಾಪಾರದಲ್ಲಿ ಹೆಚ್ಚು ಹೆಚ್ಚಾಗಿ ಬೇಕಾಗುವದರಿಂದ ವಿಶೇಷವಾಗಿರುತ್ತದೆ.

ಕನ್ನಡ ಜಿಲ್ಲೆಯಿಂದ ರಪ್ತು ಆದ ಗಂಧದ ಎಣ್ಣೆ.

೧೮೫೪ ನೇ	ಇಸವಿಯಲ್ಲಿ	ಖಂಡಿ	೪	ಮಣ	೧೬.	ಕ್ರಯ	ರೂಪಾಯಿ	೧೪೦೫೪.
೧೮೬೧ ನೇ	„	„	೧೪	„	೧೧.	„	„	೪೧೬೪೪.
೧೮೬೩ ನೇ	„	„	[illegible]	„	೧೮.	„	„	[illegible]
[illegible] ನೇ	„	„	[illegible]	„	[illegible]	„	„	[illegible]
೧೮೬೫ ನೇ	„	„	[illegible]	„	೧.	„	„	[illegible]

ಈ ಪ್ರಕಾರ ಈ ಎಣ್ಣೆ ಹೆಚ್ಚು ಹೆಚ್ಚಾಗಿ ರಪ್ತು ಆಗುವದಕ್ಕೆ ಕಾರಣವೇನಂದರೆ,—ಮೊದಲು ವ್ಯಾಪಾರಕ್ಕೆ ನಷ್ಟ [illegible] ಗಂಧದ ಎಣ್ಣೆ ಮಾಡುವದಕ್ಕೆ [illegible] ಗಳಲ್ಲಿ ಮಾತ್ರವೇ ಗಂಧದ ಬಿಟ್ಟಿಗಳನ್ನು [illegible] ಸರು; [illegible] ಯೇನಂದರೆ, ತರುವದಕ್ಕೆ ಬೇಕಾದ [illegible] ಹೋಗಿದ್ದವು. ಈ ಪ್ರಕಾರ ಮೈಸೂರ ದೇಶದಿಂದ ಸಾಕಷ್ಟು ಗಂಧವನ್ನು ಸ್ವಲ್ಪ ಬಾಡಿಗೆ ತರುವದು ಸುಲಭವಾಯಿತು.—ಕೆಲವು ಹಿಪ್ಪೆಎಣ್ಣೆ ಸಹಾ [illegible] ದ್ದವು. ಆದರೆ ಇದು ಬಹಳ ಅತಿ [illegible] ದಪ್ಪವಾಗಿಯೂ [illegible], [illegible] ಕ್ಕೆ ಮಾತ್ರವೇ ಹಾಕುವ ಔಷಧಕ್ಕೆ ಬಾರದು. [illegible] ದೇಶಗಳಲ್ಲಿಯೂ ಎಣ್ಣೆಯ ವ್ಯಾಪಾರ ವಿಶೇಷವಾಗ

ರುತ್ತದೆ; ಮತ್ತು ಕನ್ನಡ ಜಿಲ್ಲೆಯವರು ಶುದ್ಧವಾದ ಒಳ್ಳೇ ಯೆಣ್ಣೆ ಮಾಡುವ ಹಾಗೆ ಪ್ರಯತ್ನಪಟ್ಟರೆ, ಈ ಜಿಲ್ಲೆಯಲ್ಲಿ ಸಹಾ ಯೆಣ್ಣೆಯ ವ್ಯಾಪಾರವು ಪ್ರಬಲ ವಾದೀತು. ಈಗಲೂ ಯೆಣ್ಣೇ ವ್ಯಾಪಾರವು ಕನ್ನಡ ಜಿಲ್ಲೆಯಲ್ಲಿ ಅಲ್ಪವಾಗಿರುವದಿಲ್ಲ; ಹ್ಯಾಗಂದರೆ ೧೨೬೨ ನೇ ಫಸಲಿಯಲ್ಲಿ ಕನ್ನಡ ಜಿಲ್ಲೆಯಿಂದ ರಫ್ತು ಆದ ಯೆಣ್ಣೆ ಯೆಷ್ಟಂದರೆ,—

ಮೀನಿನ ಬಸಿ	ಖಂಡಿ	೨೯೯೬	ಮಾನಿ	೬.	ಕ್ರಯ	ರೂಪಾಯಿ	೬೧೨೮೪.
ಗಾಣದ ಯೆಣ್ಣೆ	"	೨೩	"	೧.	"	"	೬೫೨೧೩.
ತೆಂಗಿನ ಯೆಣ್ಣೆ	"	೨೨	"	೧೩.	"	"	೧೦೮೨.
ಲವಂಗದ ಯೆಣ್ಣೆ	"	೩	"	೧೬.	"	"	೯೬೪.
ಬೆಳ್ಳೆಣ್ಣೆ	"	೨	"	೦.	"	"	೭೬.
ಜಮಾತಿ	ಖಂಡಿ	೩೦೪೭	ಮಾನಿ	೧೬.	ಕ್ರಯ	ರೂಪಾಯಿ	೧೨೮೬೧೯.

೧೬. ಭತ್ತ. ಕೆಲವರು ಬಡಿದ ಭತ್ತವನ್ನೂ ಬಡಿಯದೆ ಇದ್ದ ಭತ್ತವನ್ನೂ ತಂದಿದ್ದರು ಸರಿ; ಆದರೆ ಬೈಹುಲ್ಲು ಯಾರೂ ತರಲಿಲ್ಲ. ತಂದದ್ದು ವಿಶೇಷವಾಗಿ ಒಳ್ಳೇದಾಗಿತ್ತು; ಕದರುಗಳು ಪುಷ್ಟಿಯಾಗಿದ್ದವು; ಆದರೆ ಇನ್ನು ಮುಂದೆ ತೋರಿಸಲಿಕ್ಕೆ ಬೈಹುಲ್ಲು ಸಹಾ ತರಬೇಕು.

೧೭. ಮರಜಾತಿಗಳು. ಇದರಲ್ಲಿ ಕನ್ನಡ ಜಿಲ್ಲೆಯ ಮರಜಾತಿಗಳ ಯರಡು ಸಂಗ್ರಹಗಳು ವಿಶೇಷವಾಗಿದ್ದವು. ಒಂದನ್ನು ಸೋದೆಯ ಸಬ್‌ಕಾನ್‌ಸರ್‌ವೇಟರ್ ತಂದಿಟ್ಟದರಲ್ಲಿ ೧೮ ಜಾತಿಯ ಮರಗಳಿದ್ದವು; ಅವುಗಳ ಬೀಜಗಳನ್ನೂ ಯೆಲೆಗಳನ್ನೂ ತಂದಕಾರಣ ವಿಶೇಷವಾಗಿತ್ತು. ಮಾಗಣೆಗಳ ಕೆಲಸ ನೋಡುವ ರೋಡ್ ಸುಪರಿಂಟೆಂಡೆಂಟ್ ಆಗಿರುವ ಮಾಧವಾ ತಂದ ಸಂಗ್ರಹದಲ್ಲಿ ೬೯ ಜಾತಿಗಳಿದ್ದವು.

೧೮. ತೆಂಗಿನಕಾಯಿ. ತರತರದ ಕಾಯಿಗಳನ್ನು ತಂದಿದ್ದರು. ಯೆಣ್ಣೆಗೂ ಆಹಾರಕ್ಕೂ ಮದ್ದಿಗೂ ಅನುವಾಗಿರುವದರಿಂದ ಕುಡಿಯುವದಕ್ಕೂ ಇತ್ಯಾದಿ ಬೇಕಾದ ಹಾಗೆ ತಂದಿಟ್ಟಿದ್ದರು

೧೯. ಹಿಟ್ಟುಗಳು. ಕೆಲವು ಮಾದಿರಿಗಳು, ಮುಖ್ಯವಾಗಿ ತಾಳೇಮರನ ಮತ್ತು ಕೂವೇಹಿಟ್ಟು ವಿಶೇಷವಾಗಿತ್ತು. ಸಾಗದ ಅಕ್ಕಿ ಹಿಟ್ಟು ವ್ಯಾಪಾರಕ್ಕೆ ಬೇಕಾದ ಹಾಗೆ ಒಳ್ಳೇದಾಗಿರಲಿಲ್ಲ; ಬಡವರು ಬರಗಾಲದ ಸಮಯದಲ್ಲಿ ಉಣ್ಣುವದಕ್ಕೆ ಪ್ರಯೋಗಿಸುವ ತರದ್ದಾಗಿತ್ತು. ಅಪ್ಪುಸಬಳ್ಳಿ ಹಿಟ್ಟು ಮದ್ದಿಗೆ ಬೇಕಾಗಿರುವದರಿಂದ ವಿಶೇಷ ತಂದಿತು.

೨೦. ಮುದ್ದೆಯೆಣ್ಣೆ. ಇದರಲ್ಲಿ ಧೂಪಮರದ ಕಾಯಿಗಳಿಂದ ಮಾಡಿದ್ದು ವಿಶೇಷವಾಗಿತ್ತು; ಆದರೆ ತಂದದ್ದು ಸ್ವಲ್ಪವಾಗಿ, ಪ್ರಯೋಜನಕ್ಕೆ ಬರುವ ಹಾಗೆ ಯಾರೂ ಮಾಡದಿರುವದರಿಂದ ಅಷ್ಟು ಪ್ರಯೋಜನವಿರಲಿಲ್ಲ. ಇದಲ್ಲದೆ ಅದರಿಂದ ಬತ್ತಿಗಳನ್ನು ಸಹಾ ಯಾರೂ ಮಾಡಲಿಲ್ಲ. ಪೂರ್ವದಲ್ಲಿ ಈ ಧೂಪದ ಮರಗಳನ್ನು ಈ ದೇಶದ ಅರಸುಗಳು ಸಾಲುಮರವಾಗಿ ನೆಡಿಸುತ್ತಿದ್ದರು. ಈ ಮರಕ್ಕೆ ಯೆಲೆಗಳು ದಪ್ಪವಾಗಿದ್ದು, ಇವು ನೆರಳಿಗೆ ಬಹಳ ಯೋಗ್ಯವಾಗಿರುವದರಿಂದ, ಸಾಲುಮರಕ್ಕೆ ಬಹಳ ಸರಿದಾಗಿರುತ್ತದೆ. ಇದಲ್ಲದೆ ಹೊಲ್ಲಕ್ಕೆ ಬೆಳೆದರೆ, ಈ ಜಾತಿ ಮರ ಕನ್ನಡ ಜಿಲ್ಲೆಯಲ್ಲಿ ಸುಲಭವಾಗಿ ಬೆಳೆಯುತ್ತದೆ. ಆದರೆ ಅದರ ಕಾಯಿಗಳಿಂದ ಸಾಕಷ್ಟು ಮುದ್ದೆ ಯೆಣ್ಣೆ ಮಾಡದೆ ... ಸಮವಲ್ಲ; ಹ್ಯಾಗಂದರೆ ವ್ಯಾಪಾರದಲ್ಲಿ ... ಇದು ಹೆಚ್ಚು ಹೆಚ್ಚಾಗುತ್ತಾ ಬರುತ್ತದೆ. ಇದಲ್ಲದೆ ಹಾಲ್ಲಾವೆ ಯೆಂಬ ವಿಲಾಯಿತಿ ವೈದ್ಯನು ನಾನಾ ಪ್ರಕಾರದ ಕುರು ಕಜ್ಜಿ ಇತ್ಯಾದಿ ರೋಗಗಳಿಗೆ ಪ್ರಯೋಗಿಸುವ ಯೆಣ್ಣೆಯಲ್ಲಿ ಧೂಪದ ಯೆಣ್ಣೆಯು ಮುಖ್ಯ ಭಾಗವೆಂತಾ ಹೇಳುತ್ತಾರೆ.

